Transfer.—ಇಲ್ಲಿನ ಸೆಂಟ್ರಲ್ ಕಾಲೇಜ್ ಅಸಿಸ್ಟಂಟ್ ಮಾಸ್ತರಾದ ಮಿ॥ ವೆಂಕಟಾದ್ರಿಅಯ್ಯರವರು ಕುಣಿಗಲ್ ಹೈಸ್ಕೂಲ್ ಹೆಡ್‌ಮಾಸ್ಟರ್ ಕೆಲಸಕ್ಕೆ ವರ್ಗಮಾಡಲ್ಪಡುವರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತ್ತದೆ. ಇದು ನಿಜವಾಗಿರುವಪಕ್ಷಕ್ಕೆ ಕಾಲೇಜ್ ಸಂಬಂಧವನ್ನು ನಿವೃತ್ತಿಮಾಡಿಕೊಂಡು ಹೋದವರಲ್ಲಿ ಇವರು ಮೊದಲನೆಯವರಾಗುತ್ತಾರೆ. ಇಂತಾ ಸಹಾಯಕರೆಲ್ಲರೂ ದೂರಪ್ರಾಂತಕ್ಕೆ ಕಳುಹಿಸಲ್ಪಟ್ಟರೆ ಕಾಲೇಜ್ ಪ್ರಾಶಸ್ತ್ಯವು ಏರೀತಿಯಾಗಿ ವೃದ್ಧಿಯಾಗುವದು? ಮಿಸ್ಟರ್ ವೆಂಕಟಾದ್ರಿಅಯ್ಯನವರ ಅನುಭವವನ್ನೂ ಯೋಗ್ಯತೆಯನ್ನೂ ನಾವು ಚೆನ್ನಾಗಿ ಬಲ್ಲೆವಾಗಿ ಅವರೊಬ್ಬ ಅಸಿಸ್ಟಂಟ್ ಮಾಸ್ತರಾಗಿರುವದಕ್ಕೆ ಅಲ್ಲದೆ ಸ್ವತಂತ್ರಾಧಿಕಾರದಲ್ಲಿ ವಿಶೇಷ ಹೆಡ್‌ಮಾಸ್ತರ್ ಮಾಡಿ ಪ್ರಾಶಸ್ತ್ಯವಂ ಪಡೆಯುವದಕ್ಕೆ ಸಮರ್ಥರಾದವರಾಗಿದ್ದಾರೆ. ಆದರೆ ಸೆಂಟ್ರಲ್ ಕಾಲೇಜಿನ ಮುಂದಿನ ಫಲವು ಶೂನ್ಯವಾಗಿರುವದೆಂಬ ಅಂಶ ಈಗ ಸಂದೇಹಿಸಕೂಡದಾಗಿದೆ.

The weather.—ಈ ಸಲ ಒಂದೆರಡುವಾರಗಳಿಂದ ಕಾಲಸ್ಥಿತಿಯು ಬಹಳ ಬದಲಾಯಿಸಿ ಭೂರಿವೃಷ್ಟಿಯಾಗಿದೆ. ಡಿ॥ ಜಾಕ್ ರಿಪೋರ್ಟುಗಳನ್ನು ನೋಡಲಾಗಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಸರ್ಕಾರ್ ಪೈರು ಚೆನ್ನಾಗಿರುವಂತೆ ತಿಳಿಯಬರುತ್ತದೆ. ಆ ಡಿಸ್ಟ್ರಿಕ್ಟಿನಲ್ಲಿ ಉಳುಮೆ ಕೆಲಸಗಳು ನಡೆಯುತ್ತಿವೆ. ಆಸ್ಪತ್ರೆ ವೈಶಾಖಫಸಲ್ ಸ್ವಲ್ಪಮಟ್ಟಿಗೆ ಕಟಾವಾಗಿರುತ್ತದೆ. ಬೇಸಾಯ ಕೆಲಸಕ್ಕೆ ಇನ್ನೂ ಮಳೆ ಬೇಕಾಗಿದೆ. ಸರ್ವತ್ರ ಜನಾರೋಗ್ಯಕ್ಕೇನೂ ಕೊರತೆಯಿಲ್ಲವು. ನೆಲಮಂಗಲ ತಾಲ್ಲೂಕು ಪೈಕಿ ಕೆಲವು ಕಡೆಗಳಲ್ಲಿ ಮಾತ್ರ ಸ್ವಲ್ಪ ಜ್ವರವಿದ್ದಿತೆಂದು ತಿಳಿಯಬರುತ್ತದೆ. ಹುಲ್ಲು, ನೀರು ಎಲ್ಲವೂ ಸಮೃದ್ಧಿಯಾಗಿವೆ.

ಕೋಲಾರ ಡಿಸ್ಟ್ರಿಕ್ಟಿನಸ್ಥಿತಿ ಸಹ ಮೇಲಿನಂತೆಯೇ ಇದೆ. ಹುಣಸೂರು ಡಿಸ್ಟ್ರಿಕ್ಟಿನಲ್ಲಿ ಅಲ್ಪಮಳೆಯು, ಪರಂತು ಡಿ॥ ಪೈಕಿ ಸರ್ಕಾರ್ ಬೆಳೆಗೆ ಹಾನಿಯಾದ ಮಳೆಯಿಲ್ಲದೆಯಿಲ್ಲವು. ಸಮಸ್ತ ಪೈರು ಬಹಳ ಚೆನ್ನಾಗಿದೆ. ಸೀರಂಗಪಟ್ಟಣ ತಾಲ್ಲೂಕಿನಲ್ಲಿ ಮಾತ್ರ ಕಾಲರಾ ರೋಗವು ಇರುವದು. ಬೇರೆ ಕಡೆ ತಾಲ್ಲೂಕುಗಳಲ್ಲಿ ಜನಗಳಿಗೆ ಆರೋಗ್ಯವಿಲ್ಲವು.

ಮೈಸೂರು ಡಿಸ್ಟ್ರಿಕ್ಟಿನಸ್ಥಿತಿ ಸರ್ವಾಂಗದಲ್ಲಿಯೂ ತೃಪ್ತಿಕರವಾಗಿದೆ. ಶಿವಮೊಗ್ಗ ಡಿ॥ ಪೈಕಿ ಶಿಕಾರಿಪುರ, ಸೊರಬ, ನಗರ ತಾಲ್ಲೂಕುಗಳಲ್ಲಿ ಕರೀ ಬೇರಾಗ್ ಕೆಲವು ಪ್ರಾಕೃತಿಕಬಂದು. ಅಲ್ಲಿಯಲ್ಲಿ ಅನಶನಕೆ ಜ್ವರರೋಗಪ್ರಕಾರ ಕರಡೋರಿಯುವೆ ದೂನ್ನಾಳಿ ತಾಲ್ಲೂಕಿನಲ್ಲಿ ಪಶುರೋಗ ಕಲೆದೋರಿ ಅವುಗಳಿಗೆ ಸುಕರಾಂ ಮುಖವಿಲ್ಲವು. ಕಡೂರು ಡಿ॥ ಪೈಕಿ ಮಲನಾಡುಪ್ರಾಂತಗಳಲ್ಲಿ ಮಳೆಯಿಲ್ಲದೆ ಪೈರುಗಳು ಒಣಗುತಲಿವೆ. ಸರ್ಕಾರ್ ಮಳೆ, ಜಲಸಮೃದ್ಧಿಯೂ ಕೃಷಿಕಾರ್ಯಗಳೂ ಉಂಟು.

A validictory order.—ಕಿಸ್ತರ್ ಬ್ರಿಗ್ಗ್ ಬರಿಯವರಿಗೆ ಮೈಸೂರು ಸ್ಟೇಟ್ ರೈಲ್ವೇಯುಲಾಖೆಯಲ್ಲಿ ಉಂಟಾಗಿದ್ದ ಸಂಬಂಧವು ಹೋದ ತಿಂಗಳಿಯೋ ನಿವೃತ್ತಿಯಾಗುವದಾಗಿರುವದರಿಂದ ಗತಸಂವತ್ಸರದಲ್ಲಿ ಸ್ಟೇಟ್ ರೈಲ್ವೇ ಕೆಲಸಗಳನ್ನು ಅವರು ಕೇವಲ ಅಕ್ಕರೆ ಮತ್ತು ಜಾಗರೂಕತೆಯೊಡನೆ ನಿರ್ವಹಿಸಿದ ವಿಷಯದಲ್ಲಿ, ಮೈಸೂರು ಸರ್ಕಾರದವರಿಗೆ ಉಂಟಾಗಿರುವ ಶ್ಲಾಘ್ಯಾಭಿಪ್ರಾಯವನ್ನು ದಿವಾನರು ಈ ಸಂದರ್ಭದಲ್ಲಿ ತಿಳಿಸಲು ಉತ್ಸಾಹಪೂರ್ವರಾಗಿರುವಂತೆ ಅವರಿಗೆ ತಿಳಿಸಲ್ಪಟ್ಟಿತು. ರೈಲ್ವೇಗೆ ಸಂಬಂಧಿಸಿದ ವಿಶಿಷ್ಟ ಆಫೀಸುಗಳಲ್ಲಿಯೂ, ಇವರು ತಮ್ಮ ಮೇಲಿನ ಸ್ಥಾನದ ಪುಷ್ಟಿಯನ್ನು ವೃದ್ಧಿಗೊಳಿಸಿದರಲ್ಲದೆ, ತಮ್ಮ ವನ್ನು ಬಹಳ ಕಟ್ಟೆಗೆ ಸಮೆಯಾಕ ಟ್ರೈನ್ ಗಳ ಬಾಕ್ಸರ್ ಮಾರ್ಗಗಳ ಖರ್ಚಿಗೆ ಪಾಲಕೇ ಸಂಬಂ

[illegible]

The Educational Department.—[illegible]

*NOTICE TO OUR CORRESPONDENTS*

[illegible]

## THE MYSORE FESTIVITIES.

*FROM OUR OWN CORRESPONDENTS*

### MYSORE.

[illegible]

## SUMMARY OF NEWS.

ವೃತ್ತಾಂತಸಂಗ್ರಹವು.

:o:

The Mahabharata.—[illegible]

A native officer shot.—[illegible]

The proposed exodus to Bangalore

A jewel taken away by a kite —

# THE MYSORE GAZETTE

## ಮೈಸೂರು ಗೆಜೆಟ್

## ಸರಕಾರದ ಕಾಗದಪತ್ರಗಳು

### ಅಪಾಯಕರವಾಗಿಯೂ ಅಂಟುಸಂಬಂಧವಾಗಿಯೂ ಇರುವ ರೋಗದ ವಿಷಯದಲ್ಲಿ ಮ್ಯೂನಿಸಿಪಲ್ ಕಮಿಟಿಯವರಿಗೂ ಅವರುಗಳ ನೌಕರರುಗಳಿಗೂ ಒಟ್ಟುತಿಳುವಳಿಕೆ

೧ ಅಂಟುಸಂಬಂಧವಾದ ವ್ಯಾಧಿಯುಳ್ಳ ಒಬ್ಬ ಮನುಷ್ಯನು ಒಂದು ಸಾಂಕ್ರಾಮಿಕ ವ್ಯಾಧಿಯನ್ನು ಉಂಟುಮಾಡುವನು

### I ವಸತಿ

### II ನೀರಿನ ಸರಬರಾಜು ವಿಷಯ

### III ಚರಂಡಿ ವಿಷಯ

3 ಅಂಗಡಿಗಳನ್ನು ಮುಚ್ಚಿಸತಕ್ಕದ್ದು

### IV ವೈದ್ಯ ಸಂಬಂಧವಾದ ಮೇಲ್ವಿಚಾರಣೆ.

### V ಅಕಸ್ಮಾತಾಗಿ ಸಂಭವಿಸುವ ವಿಷಯ ಗಳ್ಳಿ ಮುಂಜಾಗ್ರತೆ

### VI ಪೊಲೀಸಿನವರು ಮಾಡತಕ್ಕ (ಆರೋಗ್ಯ ಸಂಬಂಧವಾದ) ವಿಚಾರಣೆ

### VII ಪ್ರಾಣಿಗಳನ್ನು ಕಟ್ಟುವಿಕೆ.

### VIII ಬಟ್ಟೆ ವಿಷಯ

BANGALORE —Printed and published for the Proprietor, at the KARNATAKA PRESS —1884

CAN ASSAM EDITION

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

**Published every Monday Morning**

[illegible]

Vol. XI.] BANGALORE:—MONDAY, JUNE 30, 1884. [No. 26.

ಸಂಪುಟ. ೧೧.] ಬೆಂಗಳೂರು:—ಸಕ ೧೮೦೬ನೇ ತಾರಣ ಸಂವತ್ಸರದ ಆಷಾಢ ಶುದ್ಧ ೭ನೇ ಸೋಮವಾರ. [ಸಂಚಿಕೆ. ೨೬.

"ಕರ್ಣಾಟಕ ಪ್ರಕಾಶಿಕಾ"

ಪತ್ರಿಕೆಯ ಚಂದಾನಿರ್ಣಯ.

| | | |
|---|---|---|
| ಇಂಗ್ಲೀಷ್ ಮತ್ತು ಕನ್ನಡದಸಹಿತ ತೆಗದುಕೊಳ್ಳತಕ್ಕ ವರುಷ ೧ಕ್ಕೆ ... | | ೧೦—೦—೦ |
| ಇಂಗ್ಲೀಷುಮಾತ್ರ ತೆಗದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ... | | ೭—೦—೦ |
| ಕನ್ನಡಮಾತ್ರ ತೆಗದುಕೊಳ್ಳತಕ್ಕವರಿಗೆ ಮಾಮೂಲಿ ಮೇರೆ ವರುಷಕ್ಕೆ | | ೭—೦—೦ |
| ತಿಂಗಳು | ೧ಕ್ಕೆ | ೦—೮—೦ |
| ಸಂಚಿಕೆ | ೧ಕ್ಕೆ | ೦—೪—೦ |
| ಹಿಂದಿನ ಸಂಚಿಕೆ | ೧ಕ್ಕೆ | ೦—೫—೦ |

ಸೂಚನೆ.—ಚಂದಾದಾರರು ಇಂಗ್ಲೀಷ್ ಪತ್ರಿಕೆಗಳನ್ನಾಗಲಿ, ಕನ್ನಡ ಪತ್ರಿಕೆಗಳನ್ನಾಗಲಿ ಅಥವಾ, ಎರಡನ್ನಾಗಲಿ ತೆಗದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು.

ಪ್ರಕಟನೆಯ ರಿವಾಜ.

| | | |
|---|---|---|
| ಮೊದಲನೇದಫೆ ಪಂಕ್ತಿ | ೧ಕ್ಕೆ | ೦—೨—೦ |
| ಎರಡನೇದಫೆ ಪಂಕ್ತಿ | ೧ಕ್ಕೆ | ೦—೧—೦ |

## NOTICE TO SUBSCRIBERS.

ಇವರಿಂದ ಕೆಳಕಂಡ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರೂ ಮುಖ್ಯ ಗಮನಕೊಡಬೇಕೆಂದು ಕೋರುತ್ತೇವೆ ಏನೆಂದರೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾದಾರರನ್ನಾಗಲಿ ಯಾರ [illegible] ಯಾವುದಾದರೂ ಪತ್ರವನ್ನು [illegible] ಮೇಲೆ ಕಾಗದಗಳನ್ನು ಮತ್ತು [illegible] ಕಳುಹಿಸತಕ್ಕದ್ದು. [illegible]

೨. ಸೋಟುಗಳು ರವಾನಿಸತಕ್ಕವರು ಅರ್ಧ ಸೋಟುಗಳನ್ನು ರವಾನಿಸಿ ಬಿಟ್ಟು ಉಳಿದ ಅರ್ಧ ಸೋಟುಗಳನ್ನು [illegible] ಅರ್ಧ ಸೋಟುಗಳನ್ನು ರವಾನಿಸತಕ್ಕದ್ದು.

೩. ಕೆಲವರು [illegible] ಅರ್ಧಾಣೆಯ ಸ್ಟ್ಯಾಂಪುಗಳನ್ನು [illegible] ಕಳುಹಿಸಕೂಡದು.

೪. ಪತ್ರಿಕೆಯ ಚಂದಾ [illegible] ಚಂದಾದಾರರಿಗೆ [illegible] ಬಾಕಿಯಿರುವ ಚಂದಾಹಣವನ್ನು [illegible] ಕಳುಹಿಸಬೇಕೆಂದು ಕೋರುತ್ತೇವೆ.

## ADVERTISEMENTS.

ಇವರಿಂದ ಕೆಳಕಂಡ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಕ್ಕಿರುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು

| | | |
|---|---|---|
| ಕಾಲಾಮೃತ. | ... | ೧—೪—೦ |
| ಮುಹೂರ್ತದರ್ಪಣ. | ... | ೦—೧೦—೦ |
| ರಘುವಂಶ (ಪ್ರಸ್ತಂಗಳು) | | ೦—೩—೦ |
| [illegible] | | ೦—೫—೦ |
| [illegible] | ... | ೦—೪—೦ |
| ಶಿವಗೀತೆ | ... ... | ೦—೧೪—೦ |
| ಆನಂದಲಹರಿ. | ... | ೦—೭—೦ |
| ಬಾಲಪ್ರಬೋಧ | ... ... | ೦—೨—೦ |
| ವೈದ್ಯಸಾರಸಂಗ್ರಹ | ... | ೫—೦—೦ |

ಕನ್ನಡಗ್ರಂಥಗಳು.

| | | |
|---|---|---|
| ಹರಿವಂಶಭಾಷ. | ... | ೦—೭—೦ |
| ಶಕುಂತಲಾನಾಟಕ. | ... | ೦—೪—೦ |
| ಮತ್ಸ್ಯಬಾಗಲ್ಯಾಣ | ... | ೦—೩—೦ |
| ಸುಧಾಮಚರಿತ್ರೆ. | ... ... | ೦—೨—೬ |
| ಬ್ರಹ್ಮನಾಟಕಸಂಗ್ರಹ. | ... | ೦—೬—೦ |
| ಆಶೀಸುಮ್ನಕಾಪೆ. | ... | ೦—೨—೬ |
| ಯಕ್ಷಗಾನಸಭಾಚರಿತ್ರೆ | ... | ೦—೬—೦ |
| ಶ್ರೀರಂಗರಾಜಮಾಲಿಕೆ. | ... | ೦—೨—೬ |
| ಪಂಚತಂತ್ರಕಥೆ. | ... | ೦—೭—೦ |
| ಕಾಳಿದಾಸ ಮಹಿಮೆ. | ... | ೦—೩—೦ |
| ವಿರಾಟ. | ... ... | ೦—೨—೦ |
| ಹರಿಶ್ಚಂದ್ರ. | ... | ೦—೦—೯ |
| ಇಂಗ್ಲೀಷುಕನ್ನಡ ನಿಘಂಟು | | ೧—೦—೦ |
| ಜ್ಞಾನಸಿಂಧು, | ... ... | ೨—೦—೦ |
| ಭ್ರಾಂತಿವಿಲಾಸ. | ... | ೦—೧೨—೦ |
| ಕುಶಲವ | ... | ೩—೪—೬ |
| ವೃಷಭೇಂದ್ರವಿಜಯ | ... | ೩—೪—೬ |
| ಆರೋಗ್ಯ ಸ್ಟೇಟ್ ಎಂಬಳಿಕೆ. | | |
| ೧ನೇ ಸಂಚಿಕೆ. | ... | ೦—೮—೦ |
| ಡಿಟ್ಟೊ ೨ನೇ ಸಂಚಿಕೆ. | | ೦—೮—೦ |
| ಶೃಂಗಾರರಸವಿಲಾಸ. | ... | ೦—೮—೦ |

ಸಂಸ್ಕೃತ ಮೂಲಗ್ರಂಥಗಳು.

| | | |
|---|---|---|
| ಭಗವದ್ಗೀತೆ | ... ... | ೦—೩—೦ |
| ವಿಷ್ಣುಸಹಸ್ರನಾಮ | .. | ೦—೫—೦ |
| ಸೂರ್ಯಸಹಸ್ರನಾಮ. | ... | ೦—೨—೬ |
| ಕೃಷ್ಣಕರ್ಣಾಮೃತ. | .. | ೦—೨—೬ |
| ಬಾಲರಾಮಾಯಣ | .. | ೦—೦—೬ |
| ಶ್ರೀ ಕಾಂಡಅಮರ. | ... | ೦—೩—೦ |
| ೧ ಕಾಂಡ ಅಮರ. | ... | ೦—೧—೦ |

ಹೊರ ಊರಿನವರು [illegible] ಸೇರಿಸಿ ಕಳುಹಿಸತಕ್ಕದ್ದು. [illegible]

## NOTICE.

## VAIDYASARA SANGRAHA.

Price including Postage, Rs 5 6 0

ಈ ಗ್ರಂಥವು [illegible] ರಾಜ ರಾಜೇಶ್ವರಿಗೆ [illegible] ಬೆಂಗಳೂರು [illegible]

ಗ್ರಂಥ ದೊರೆಯುವ ಸ್ಥಳ [illegible]

| | | |
|---|---|---|
| ಬೆಂಗಳೂರು | ... ... | ರೂ॥ ೫—೦—೦ |
| ಪಾಕಿಂಗ್ ಮತ್ತು ಅಂಚೆಕಾಸಲ್ | | ೦—೬—೦ |

ಟಿ. ಬಿ. ವೆಂಕಟಾಚಾರ್, [illegible] ಬೆಂಗಳೂರು

ಪ್ರಕಟನೆ

ಕರ್ಣಾಟಕ ಮುದ್ರಾಕ್ಷರಶಾಲೆಯಲ್ಲಿ ಇಂಗ್ಲೀಷ್ ಮತ್ತು ಕನ್ನಡದಲ್ಲಿಯೂ ಕೆಲಸಗಳನ್ನು [illegible] ಚಿಲ್ಲರೆ ಕೆಲಸಗಳನ್ನು [illegible] ಅವರು ಒಳ್ಳೆ [illegible] ಮನೆಯೊಳಗೆ ಮಾಡುತ್ತಾರೆ.

## NOTICE.

ಹೊಸಪುಸ್ತಕಗಳು" ಹೊಸಪುಸ್ತಕಗಳು !!!

ಆರಣ್ಯಕವಾಗಿ,
ಪ್ರತಿಗ್ರಹಸ್ವರಮನೆಯಲ್ಲಿಯೂ
ಉದಯೋಗವಾದ ಬಿ. ವೆಂಕಟಾಚಾರ್ಯರಿಂದ
ಪ್ರಣೀತವಾದ
ಕನ್ನಡ ನಾಟ್ಯಶಾಸ್ತ್ರಗಳು.

| | | |
|---|---|---|
| ಶಕುಂತಲಾನಾಟಕದ ೧೦ನೆ ಅಂಚೆ ಹಾಸಿಲುಹಣ | | |
| ಭಾರತಮಹಿಳಾ | ೧—೨ | ಡಿಟ್ಟೊ |
| ಸೀತಾವನವಾಸ | ೧—೨ | ಡಿಟ್ಟೊ |
| ಭ್ರಾಂತಿವಿಲಾಸ | ೧—೨ | ಡಿಟ್ಟೊ |

ಇವು ಬೆಂಗಳೂರು ಸುಲ್ತಾನ್‌ಪೇಟೆಯಲ್ಲಿರುವ [illegible] ಅಂಥ ಪುಸ್ತಕ ಮಾರುವವರಲ್ಲಾಗಲಿ, ಅಥವಾ ಇವರದು ಮಾಡುವವರಲ್ಲಾಗಲಿ ದೊರೆಯುವವು.

ಬಿ. ವೆಂಕಟಾಚಾರ್,
ಶಿರಸ್ತೇದಾರ್, ಡಿ॥ ಕೋರ್ಟ್
ಶಿವಮೊಗ್ಗ.

ನೋಟೀಸು.

ಅರಮನೆ ಇಲಾಖಾ ಅಸಿಸ್ಟೆಂಟ್ ಕಮ್ಮೀಷನರ್ ಆಫೀಸಿನಿಂದ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನೆಂದರೆ.—ಕೆಲವು ಸ್ವರ್ಗಸ್ಥರಾದ ಜನಗಳ ಸಾಲಗಳನ್ನು ತೀರಿಸುವುದಕ್ಕೋಸ್ಕರ (೬೦,೦೭೩) ಅರವತ್ತು ಸಾವಿರದ ಎಪ್ಪತ್ತು ಮೂರು ರೂಪಾಯಿ ಬೆಲೆಯುಳ್ಳ ಜವಾಹಿರ್ ವಗೈರೆ ಒಡವೆಗಳನ್ನು ಸನ್ ೧೮೮೪ ಜುಲೈ ತಾರೀಖ್ ೧ ಮಂಗಳವಾರ ಹಗಲು ೧೨ ಘಂಟೆ ಮೊದಲುಗೊಂಡು ಮತ್ತು ಅದರ ಮುಂದಣ ದಿನಗಳಲ್ಲು ಸಹ ಮೈಸೂರು ಅರಮನೆ ಖಜಾನೆಯ ಹರಾಜ್ ಮಾಡುವುದರಿಂದ [illegible] ಬಂದು [illegible] ಮಾಡಬಹುದು. ಈ ಒಡವೆಗಳ ವಿವರ ಮೈಸೂರು ಗೆಜೆಟ್ಟಿನ ಕನ್ನಡಭಾಗದಲ್ಲಿ ಗೊತ್ತಾಗುತ್ತ ತಿಳಿಯುವುದು.

೨೬-೬-೮೪ } ಮೈಸೂರು. } E. CHIDAMBARAIYA

THE KARNATAKA PRAKASIKA
ಕರ್ಣಾಟಕಪ್ರಕಾಶಿಕಾ.

MONDAY, JUNE 30, 1884.

### LATE PRINCE GOPAULRAJ URS.

ಸಕಲ ಜನಾಧಿ ಸುದರ್ಶನೀಯನಾದ ಮಹಾರಾಜಪುತ್ರ ಜನಸ ಮಿಜನರ್ನಾದ [illegible] ಸಕಲ ಜನಗಳಿಗೂ ತಿಳಿಸಿದ ಅಲ್ಪಕಾಲದಲ್ಲಿಯೇ ಶ್ರೀಮನ್ ಮಹಾರಾಜರವರಿಗೂ, ರಾಜಮನೆತನಕ್ಕೂ ಶಿರೋಧರರು ಮುಖ ಪಾತನ ನಿಪುಣವಾದ ಮಹೋಚ್ಚ ದುರವರು ಈ ಪತ್ರಿಕಾಮೂಲಕ ತಿಳಿಸಬೇಕಾಗಿಬಂದ ನಮ್ಮ ಮಂದಭಾಗ್ಯಕ್ಕಾಗಿ ನಾವು ಬಹು ವ್ಯಥೆಪಡುತ್ತೇವೆ, ಅದೇನೆಂದರೆ,—

ಮಹಾರಾಜರವರ ಜ್ಯೇಷ್ಠ ಸೋದರರಾದ ಗೋಪಾಲರಾಜೇ ಅರಸಿನವರು ಹಾದೇ ಮಹ ೨೩ನೇ ತಾರೀಖು ಸೋಮವಾರ ಸಾಯಂಕಾಲ ಸುಮಾರು ೬॥ ಘಂಟೆಗೆ ಮೈಸೂರು ಕೋಟೆಯಲ್ಲಿ ಸ್ವಗೃಹದೊಳು ಐಹಿಕ ಭೋಗಭಾಗ್ಯಗಳನ್ನೆಲ್ಲತೊರೆದು ಕಾಲಗತಿಯನ್ನೈದಿದರೆಂಬ ವೃತ್ತಾಂತವನ್ನು ಆ ಪೂರಣೆಯಣನೆನೆಸಿ ಅತ್ಯಂತ ದುಃಖಿತರಾದೆವು. ಇವರಿಗೆ ಕೆಲವುಕಾಲದಿಂದ ಉಂಟಾಗಿದ್ದ ಬಹುಮೂತ್ರೋಪದ್ರವವು ಕೇವಲ ಅಂತರಂಗವಾಗಿ ಯಿತ್ತೇ ಹೊರತು ಅದನ್ನವರು ವ್ಯಕ್ತಿಗೆಸದ ಯಾವ ಕಾರಣದಿಂದಲೋ ಹೊರಪಡಿಸಲಿಲ್ಲವು. ಈ ಅರಸಗವರು ಮೃತರಾದುದಕ್ಕೆ ಹಿಂದಿನ ಹದಿನೈದುದಿವಸಗಳವರಿಗೆ ಆರೋಗ್ಯದೃಢಗಾತ್ರರಾಗಿರುತಲಿದ್ದರು. ಪೂರ್ಣ ವಯಸ್ಸಿನೊಳಂದರೆ ೩೧ ಸುವತ್ಸರದೊಳಗೆ ಇವರಿಗಾಗಿ ಮೃತ್ಯುವು ಮುಟ್ಟಿ ಹಾಕಿತ್ತೋ ನಾವರಿಯೆವು. ಅದೇ ದಿನರಾತ್ರಿ ದೊಡ್ಡಕೆರೆಕೆಳಗೆ ಕ್ರಮಪ್ರಕಾರ ಔರ್ಧ್ವದೇಹಿಕ ಕ್ರಿಯೆಗಳೆಲ್ಲ ಸಾಂಗವಾಗಿ ನೆರವೇರಿದವು. ಈ ದೊಡ್ಡಮನುಷ್ಯರು ಔದಾರ್ಯದಿಂದಲೂ, ಪ್ರಜಾಭಿಮಾನ ಮುಂತಾದ ಇತರ ಸುಗುಣಗಳಿಂದಲೂ, ಜನಗಳ ಪ್ರೀತಿ ಗೌರವಗಳಿಗೆ ಬಹಳ ಪಾತ್ರರಾಗಿದ್ದರು. ಮುಖ್ಯವಾಗಿ, "ಇಷ್ಟ ಮಿತ್ರಜನ ಸಮಾಗಮೋಜನಾಂತರಸದ ಸ್ವಾಂತೆ ವಿರಹಸ್ವಾಂತಮ್" ಎಂಬಂತೆ ಪರಸ್ಪರ ಸಂಯೋಗಸುಖವು ಪ್ರಾಣಿಗಳಿಗೆ ಕ್ಷಣಿಕವಾದ್ದಾಗಿಯೂ, ವಿಯೋಗದುಃಖವು ಚಿರಕಾಲಿಕವಾದ್ದಾಗಿಯೂ ಇರುವದಾದಕಾರಣ ಶ್ರೀಮನ್ಮಹಾರಾಜರವರಿಗೆ ಭ್ರಾತೃವಿಯೋಗಜನ್ಯವಾದ ದುಃಖವು ಅತಿ ದಾರುಣವಾಗಿರುವದು. ಈ ವಿಷಯದಲ್ಲಿ ನಮ್ಮ ಮೈಸೂರು ಬಾತ್ಮಿದಾರರು ಬರೆಯುತ್ತಾರೇನೆಂದರೆ—ಮಹಾರಾಜರವರು ಹೊರಡೋಕ್ಕೆಂದ್ರಲ್ಲಿ ಕಂಡುಕೊಳ್ಳಬೇಕಾಗಿದ್ದಾಗ್ಯೂ ತಮ್ಮ ಅಣ್ಣನವರ ಮರಣವೃತ್ತಾಂತವಂಕೇಳಿ, ಕೂಡಲೇ ವಿಷಣ್ಣವದನರಾಗಿ ಅರಮನೆಗೆ ಸವಾರಿಚಿತ್ತೈಸಿದರು. ಈ ಮರಣವೃತ್ತಾಂತವು ಹೊರಡುವಕೂಡಲೇ ಪುರಜನಂಗಳು ಅರಸಿನವರ ಕಳೇಬರವನು ನೋಡಬೇಕೆಂದು ಅಪೇಕ್ಷೆಯಿಂದ ಅವರಮನೆಗೆ ಗುಂಪುಗುಂಪಾಗಿ ಹೋದರು. ಪರಂತು ಒಬ್ಬರಿಗೂ ಅದಕ್ಕೆ ಅಲ್ಲಿ ಅವಕಾಶದೊರೆಯಲಿಲ್ಲವು. ಅರಸಿನವರ ಮರಣವು ಹೊರಗೆಬಿದ್ದನಂತರ ಕಿಟಕಿ [illegible] ಇತರ ಅರಸು ಮಕ್ಕಳಿಗೂ, ಇನ್ನು ಳಿದವರು ಸ್ನೇಹಿತರಿಗೂ, ಸುಗುಣಗಳು ನಿರಾಶ್ರಯಗಳಾದವು ಆಗಿಯೂ ಪರಿತಪಿಸುತಲಿದ್ದರು. ಮಿ॥ ರಾ॥ ಸುಬ್ರಹ್ಮಣ್ಯರಾಜೇ ಅರಸಿನವರು ಆಪ್ತರನ್ನು ವಿಮುಕರಾಗಿಸಿ ಕೂಡಲೇ ತಮ್ಮ ಅಣ್ಣನವರ ಮನೆಗೆ ಹೋದರು. ಇಷ್ಟರಿಂದ ವಿರಹವ್ಯಸನಿಯು ಪ್ರೇರಣೆಯಿದ್ದವರಿಗೆಲ್ಲ ಬಹಳ ಸುಖಕರವಾಗಿತ್ತು. ಶ್ರೀಮನ್ಮಹಾರಾಜರವರು ಈ ಅತ್ಯಂತ ಚಿಂತಾಕ್ರಾಂತರಾಗಿರುವಂತೆ ತಿಳಿದು ಬರುವದಲ್ಲದೆ ಅವರು ಈವರೂ ಪ್ರಯಾಣವನ್ನು ಸಹ ಮುಂದೆ ನಿಲ್ಲಿಸಿದಂತೆ ಇದ್ದು, ಯೂರೋಪಿಯನ್ ಮತ್ತು ಯೂರೋಪಿಯನ್ನರಗಳಿಗೆ ಔತಣ ಮಾಡಬೇಕೆಂದುದ್ದೇಶಿಸಿದ್ದದ್ದನ್ನು ಕೂಡ ನಿಲ್ಲಿಸಿದ್ದಾರೆಂತಲೂ ತಿಳಿದುಬರುತಿರುವುದು.

ಮುಖ್ಯವಾಗಿ ಮಹಾರಾಜರವರಿಗೆ ಸಂಭವಿಸಿರುವ ಸಮಯದಲ್ಲಿಂತಾ ಅವಘಾತ ವಿಷಾದಪ್ರಯುಕ್ತವು ಅವರ ಪ್ರಜೆಗಳಾದ ನಮ್ಮ ಸಿದ್ಧ ಮನಸ್ಸನ್ನೂ ಒಡೆಸಿ ವಿಷಾದಿಸುವೆವು.

### PUBLIC SAFETY IN MYSORE

*(Communicated.)*

ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟತರುವಾಯ ಏರ್ಪಟ್ಟ ಯೆರಡು ರಿವಾರ್ಗನಿಗಳ ಮೂಲಕ ಅನೇಕ ಬದಲಾವಣೆಗಳು ನಡೆದವು. ಆಸ್ಮೈಕೆ ರಿವಿಸ್ಯೂಬಾಬಿನಲ್ಲಿ ಕೆಲವು ಡಿಸ್ಟ್ರಿಕ್ಟುಗಳು ಮೌಕೂಫ್‌ಮಾಡಲ್ಪಟ್ಟದ್ದು, ಜಾಗದವರೆನ್ನಿ ಚೀಫ್‌ಕೋರ್ಟಿಗೆ ಮೂರುಮಂದಿ ಜಡ್ಜಿಗಳೇರ್ಪಟ್ಟದ್ದು, ಇವುಗಳೇ ಮುಖ್ಯವಿಷಯಗಳಾಗಿರುತಿವೆ. ಪರದೋಬಾಬಗಳಲ್ಲಿಯೂ ಬುದ್ಧಿವಂತರಾದ ಅನೇಕ ಚಿಲ್ಲರೆ ನೌಕರರು ನಿರಾಧಾರಿಗಳಾದದ್ದು ಸಾಧಾರಣಾಂಶವಾಗಿರುತಿದೆ. ರೈತರವಿಷಯದಲ್ಲಿ ಫರ್ಯಾದಿಕೇಳತಕ್ಕವರಿಲ್ಲದೇಹೋದದ್ದು ಮಾತ್ರವಲ್ಲದೆ ಕಳ್ಳರ ದೆಸೆಯಿಂದ ಜನಗಳ ಪ್ರಾಣಮಾನ ಧನಗಳ ಸಂರಕ್ಷಣೆಯಿಲ್ಲದೆ ಅವು ಸಾಪಾಯವಾಗಿವೆ. ಈಗ ಕಳ್ಳತನಗಳು ಯಾವಕಾರಣದಿಂದ ಹೀಗೆ ವೃದ್ಧಿಯಾಯಿತೆಂದು ಊಹಿಸತಕ್ಕದ್ದಾಗಿದೆ. ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಮತ್ತು ಕಡಪಾ ಬಳ್ಳಾರಿಜಿಲ್ಲಾ ಸರಹದ್ದು ತಾಲ್ಲೂಕುಗಳಾಗಿರುವ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಗುಮ್ಮನಾಯಕನಪಾಳ್ಯ ವಗೈರೆ ತಾಲ್ಲೂಕುಗಳಲ್ಲಿ ಕಳ್ಳತನಹೆಚ್ಚಾದದಕ್ಕೆ ಅನ್ಯದೇಶದ ಸಾಮಾನ್ಯಜನರು ಅಲ್ಲಿಗೆ ಬಂದುಸೇರಿರಬಹುದೆಂದು ಊಹಿಸುವಣವೆಂದರೆ, ಮೈಸೂರುಆಚೆ ಇಲ್ಲಾಕೆ ಮೊದಲು ಕೊಡಗುಸರಹದ್ದುತನಕ ವಿಶೇಷ ಕಳ್ಳತನಗಳು ನಡೆಯುತಲಿವೆ. ಸದರೀ ಜಾಗಾಗಳಲ್ಲಿ ನಡೆಯತಕ್ಕ ಚೋರೀಗಳಿಗೆ ಸ್ವದೇಶೀಯರೇ ಕಾರಣಭೂತರಾಗಬೇಕಾಯಿತಷ್ಟೆ. ಚಿತ್ರದುರ್ಗಡಿಸ್ಟ್ರಿಕ್ಟಿನಲ್ಲಿ ಮೇಲೆ ತಿಳಸಲ್ಪಟ್ಟ ಪ್ರದೇಶಗಳಿಗಿಂತಲೂ ಅತ್ಯಧಿಕವಾಗಿ ಚೋರಿಧಪ್ಪೆಗಳು ನೆಡೆಯುತಲಿವೆ. ಹೀಗೆ ಸರ್ವತ್ರ ವ್ಯಾಪಿಸಿರುವ ಕಳ್ಳತನಕ್ಕೆ ಕಾರಣರಾದವರನ್ನು ಯಾವವಿಧದಿಂದಲೂ ತಿಳಿಯ ಕೂಡದ್ದಾಗಿದೆ. ಅನೇಕ ಕಡೆಗಳಲ್ಲಿ ಕಳ್ಳರು ಭಿಕ್ಷುಕ ವೇಷದಿಂಬಂದು ಮನೆಗಳನ್ನೂ ತಮಗೆ ಸಾಧಕವಾದ ಮಾರ್ಗಗಳನ್ನೂ ಕಂಡುಕೊಳ್ಳುತ್ತಾರೆಂತಲೂ, ಗೋಪಾಲಕರನ್ನುಕೇಳಿ ಸಾಹುಕಾರರು ಥಲಾನೆಯವರೆಂದು ನಿರ್ಧರಿಸಿ ತಿಳಿದುಕೊಳ್ಳುತ್ತಾರೆಂತಲೂ, ಮುಂಚಿತವಾಗಿ ಕಲ್ಲುಗಳನ್ನೆಸದು ಗ್ರಾಮಗಳಲ್ಲಿ ಜನಗಳ ಜಾಗರೂಕತೆಯನ್ನೂ ಅವರ ಸಂಖ್ಯೆಯನ್ನೂ ಅರಿತುಕೊಳ್ಳುತ್ತಾರೆಂತಲೂ, ಅನೇಕ ಸ್ಥಳಗಳಲ್ಲಿ ಭೂತಾಳದ ಏಣಿಗಳನ್ನು ಹಾಕಿ ಮನೆಗಳಮೇಲಕ್ಕೆ ಹತ್ತುತ್ತಾರೆಂತಲೂ, ಮನೇ ಜನಗಳಿಗೆ ಮುಖದ ಮೇಲೆ ಬೂದಿ ಚೆಲ್ಲುವದರಮೂಲಕ ಯೆಚ್ಚರಿಕೆಯನ್ನು ಹೋಗಲಾಡಿಸುತ್ತಾರೆಂತಲೂ, ಅನೇಕ ಪ್ರದೇಶಗಳಲ್ಲಿ ಅವರು ಹೆಂಗಸರನ್ನು ಕೆಡಿಸುತ್ತಾರೆಂತಲೂ, ಬಲಿಷ್ಠರಾದ ಗಂಡುಸರನ್ನು ಕತ್ತಿ ಭರ್ಜಿಗಳಿಂದ ಘಾಯಪಡಿಸಿ ಖೂನಮಾಡುತ್ತಾರೆಂತಲೂ ತಿಳಿಯಬರುತಿದೆ. ಮೈಸೂರುಸರ್ಕಾರದವರು ಅನೇಕ ಪ್ರದೇಶಗಳಲ್ಲಿ ಇನ್ಸ್‌ಪೆಕ್ಟರ ತಲಬಗಳನ್ನು ಜಾಸ್ತೀಮಾಡಿ ಅಮಲ್ದಾರ್ರುಗಳಿಗೆ ಪೋಲೀಸ್ ಅಂತಾನಗಳನ್ನು ಸೇರಿಸಿ ಕುದುರೇಖರ್ಚಿಗೆ ಅಲೋವೆನ್ಸ್ ಕೊಟ್ಟು ಬಂದೋಬಸ್ತು ಮಾಡಿದ್ದಾರೆ. ಇನ್ನೂ ಪ್ರಕಾರೇ ಹೆಚ್ಚಾದರೆ ಪೋಲೀಸ್ ಅಧಿಕಾರಿಗಳಿಗೆ ಸಾವಿರ ರೂಪಾಯಿಗಳವರಿವಿಗೆ ಸಂಬಳಗಳನ್ನುಜಾಸ್ತೀಮಾಡುವದಕ್ಕೆ ಸರ್ಕಾರದವರುಹಿಂದೆಗೆಯುವಸ್ಥಿತಿಯಲ್ಲಿಲ್ಲವು. ಹೀಗೆ ಬಂದೋಬಸ್ತು ಮಾಡಿದಾಗ್ಯೂ ಚೋರಿಗಳು ಹೆಚ್ಚುತಬಂದರೆ ಯಾರೇನುಮಾಡಬಹುದು. ಪೋಲೀಸ್‌ಜವಾನರೇ ಇಂತಾ ಕೆಲಸಗಳಿಗೆ ಶಾಮೀಲ್ ಆಗುತ್ತಾರೆಂಬದನ್ನು ಮೈಸೂರುಸರ್ಕಾರದವರು, ಬಹಳಜಾಗರೂಕತೆಯೊಡನೆ ಕಂಡುಹಿಡಿದು ಉಕ್ಕಡ ಕಣಿವೆಗಳಲ್ಲಿಯೂ, ಸಾಧಾರಣವಾದ ಗ್ರಾಮಾಂತರಗಳಲ್ಲಿಯೂ, ಅಂತವರ ಪ್ರವೇಶಕ್ಕೆ ಅವಕಾಶವೇ ಇಲ್ಲದಂತೆ ಮಾಡಿದಾರೆ. ಗ್ರಾಮಸ್ಥರು ಪೋಲೀಸಿನವರೆಂಬ, ಅಥವಾ ತಮ್ಮಪ್ರಾಣಮಾನ ಧನಗಳನ್ನು ನಿರಪಾಯವಾಗಿ ಕಾಪಾಡುವದಕ್ಕೆ ಲಾಯಖಾದವರೆಂಬ ಭ್ರಾಂತಿಯಿಂದ ಯಾರನ್ನಾದರೂಜನಗಳು ಸೇರಿಸಿಕೊಳ್ಳಬಹುದೆಂದು ಯೋಚಿಸಿಅವರಕೈಯಲ್ಲಿ ಹಣವಿಲ್ಲದೆ ಹೋಗುವಂತೆ ಅವರಿಗೆಜಾಸ್ತೀರೇಟಿನಿಂ ಮೊಹತರಫಾ ಏರ್ಪಾಡುಮಾಡಿದಾರೆ. ಗ್ರಾಮಾಂತರಗಳಲ್ಲಿ ಪುಂಡುತನಕ್ಕೆ ಅವಕಾಶವಿಲ್ಲದಂತೆ ತಾಲಿಂಖಾನೆಗಳನ್ನು ಮೌಕೂಫ್‌ಮಾಡಿ ಕವಾಯಿತಲ್ಲುಗಳನ್ನು ಸಹ ಜನಗಳುಕೈಯಲ್ಲಿಹಿಡಿಯದಂತೆಬಂದೋಬಸ್ತು ಮಾಡಿದ್ದಲ್ಲದೆ ಅವರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಗ್ರಾಮದಲ್ಲಿ ಸ್ಕೂಲ್‌ಗಳನ್ನು ಸ್ಥಾಪಿಸಿದಾರೆ. ಯೇವಂಚ ತತ್ಕಾಲದಲ್ಲಿ ಗ್ರಾಮಸ್ಥರು ಕಳ್ಳರನ್ನು ಯೆಷ್ಟುಮಾತ್ರವೂ ಯೆದುರಿಸುವಂತೆ ಇಲ್ಲವು. ಮೈಸೂರು ದೇಶದಲ್ಲಿ ನೆಡೆಯತಕ್ಕ ಕಳ್ಳತನಗಳನ್ನು ಹ್ಯಾಗೆ ಬಂದೋಬಸ್ತು ಮಾಡಬೇಕೋ ನಾವರಿಯೆವು. ಆದರೆ ನಗರ ಬಂದೋಬಸ್ತಿಯಬಗ್ಯೆ ಮೊಕರರಾಗಿರುವ ಅಧಿಕಾರಿಗಳು ತಮ್ಮ ಕರ್ತವ್ಯವೊಳೇನಾದರೂ ಲೋಪಮಾಡುತ್ತಾರೆಯೇ ಅಂದರೆ ಹಾಗೇನೂ ಇಲ್ಲವು. ವಿಚಾರಣೆಯಬಗ್ಯೆ ಯೇರ್ಪಟ್ಟರುವ ಅಧಿಕಾರಿಗಳು ಪ್ರತಿದಿನವೂ ಬೆಳಿಗ್ಗೆ ಸಾಯಂಕಾಲ ಪಹರೆನಲ್ಲಿ ಸಂಚಾರಮಾಡುತ ಪೋಲೀಸ್ ಸ್ಟೇಷನ್ನುಗಳ ಪಾರೀಜನ್ನೂ, ಪೋಲೀಸಿನವರ ದುಸ್ತು ನೈಮರ್ಲ್ಯವನ್ನೂ ತನಿಖೀ ಮಾಡುತಲಿರುತ್ತಾರಲ್ಲವೆ. ಇವಕ್ಕಿಂತಲೂ ಅವರಿಂದ ನಾವಿನ್ನೆಷ್ಟು ನಿರೀಕ್ಷಿಸಬಹುದು ? ಇನ್ಸ್‌ಪೆಕ್ಟರ್‌ಗಳೂ ಪ್ರತಿದಿನವೂ ವಿರಾಮವಾದಾಗ ಸ್ಟೇಷನ್ನುಗಳನ್ನೂ ಠಾಣೀಗಳನ್ನೂ ತನಿಖೀ ಮಾಡುವದಿಲ್ಲವೆ ? ಕಾನ್ಸ್‌ಟೆಬಲ್‌ಗಳು ತಮ್ಮ ಜಾಗಾಗಳನ್ನು ಬಿಟ್ಟು ಕದಲಿದರೆ ಯಲ್ಲಿ ಯೇನು ಪ್ರಮಾದ ಉಂಟಾಗುವದೋ ಯೆಂದು ಚಿಂತಿಸಿ ಆಚೀಈಚೆ ಕದಲದೆ ಇರುತ್ತಾರಷ್ಟೆ. ಇಷ್ಟು ಬಂದೋಬಸ್ತು ಇದ್ದಾಗ್ಯೂ ದೇಶವು ಕ್ಷೇಮಬುದ್ಧಿಗೆ ಬಾರದೇ ಇರುವದರಿಂದ ಮುಂದೆ ಮಹಾರಾಜಾ ಸರ್ಕಾರದವರು ತಕ್ಕ ಬಂದೋಬಸ್ತು ಮಾಡಬೇಕಾದ್ದು ಆವಶ್ಯಕವಾಗಿರುತಿದೆ, ಅದೇನೆಂದರೆ, ಇನ್ಸ್‌ಪೆಕ್ಟರಗಳಿಗೆ ಮತ್ತಷ್ಟು ತಲಬಗಳನ್ನು ಜಾಸ್ತೀಮಾಡಿ ಅವರನ್ನು ನಿರ್ವ್ಯಾಪಾರರಾಗಿ ಕುಳ್ಳಿರಿಸಬೇಕಾದ್ದಲ್ಲದೆ ಜನಗಳದುಷ್ಕೃತ್ಯಗಳು ನಾಡಲಾಗದು, ಕಳ್ಳತನ ಮಾಡಲಾಗದು, ಯೆಂದು ಮುಂತಾಗಿ ಮಿಷನರಿಗಳಂತೆ ಬೀದಿಗಳಲ್ಲಿ ಹಿತಬೋಧೆ ಮಾಡುವದಕ್ಕೆ ಕಾನ್ಸ್‌ಟೆಬಲ್‌ಗಳಿಗೆ ಕಲಿಸಿಕೊಟ್ಟರೆ, ಬಗೆಲೇನಾದರೂ ಕಳ್ಳತನಗಳು ಕಡಮೆಯಾಗಬಹುದೇ ಹೊರ್ತು ಇಲ್ಲದಪಕ್ಷಕ್ಕೆ ಈಗ ಉಂಟಾಗಿರುವಪ್ರಕಾರ ಕುದ್ದಾಂಗ ತಪ್ಪಲಾರದು. ಈ ಸಲಹೆಗೆ ಶ್ರೀಮನ್ಮಹಾರಾಜಾ ಸರ್ಕಾರದವರು ಅವಧಾನವನ್ನು ಕೊಟ್ಟು ತ್ವರೆಯೊಳು ಅವರು ಈ ಜಾರಿಯಲ್ಲಿ ತರುವರಾದರೆಜನಗಳು ಸುಖಪಡುವದಕ್ಕೆ ನಿಮಿತ್ತವಾಗುವದು!!!

———:0:———

### HONESTY OF SOME RAILWAY SERVANTS.

ಈಚೆಗೆ ವಿದಾಗು ದಿನಗಳ ಹಿಂದೆ ಇಲ್ಲಿನ ವರ್ತಕ ಸೊಪ್ಪಿನ ಮೈಸೂರಿಗೆ ಕಳುಹಿಸತಕ್ಕಬಗ್ಯೆ ಕ್ಯಾಕೋಸೀರ ಮೂಡ್ಡೆಯ ಬಾಬು ಡಂಟಿರ ಗಳನ್ನು ಕಾಲೂರುಪೇಟೆಮಾರ್ಕೆಟ್ ರೆಯಿಲ್ವೇ ಸ್ಟೇಷನಿಗೆ ಕಳುಹಿಸಿದನು. ಅವುಗಳನ್ನು ತೆಗದು ಕೊಂಡು ರಸೀದಿಕೊಟ್ಟ ಅಧಿಕಾರಿಯು, ರಸೀದಿಯಲ್ಲಿ ಗಂಟಗಳು ಒಡೆದುಹೋಗಿರುವಂತೆಯೂ, ಸಿಟಿಗಳು ಸೋರುತಲಿರುವಂತೆಯೂ ಅವು ಬರುವಾಗ ಮೈಸೂರು ಕೆಲಪುರದ ಕೊಳಗಾ ಗಿಹೋಗಿ ಹಾನಿಯಾಗಬಹುದೆಂತಲೂ ನಮೂದಿ [illegible]

ಸಿದ್ದನು. ಈಪರಾ ಮುಷ್ಟರವಟ್ಟಿಗೆಯಿಂದಾದದ್ದೋ ಅದನ್ನು ತಿಳಿದು ಕೊಳ್ಳುವದಕ್ಕೋಸ್ಕರ ಮಾಲೀಕನು ಕೂಡಲೇ ಸ್ಟೇಷನಿಗೆ ಹೋಗಿ ನೋಡುವಲ್ಲಿ ಅಂ ಟಾಪ ಆ ಬರೆದ ಅಧಿಕಾರಿಯೂ, ಇನ್ನು ಮೂ ಗುಸುದಿ ಪ್ರೋಟೆಸ್ಟ್ ಗಳೂ ಸೋರುತಿದೆಯೆಂ ದು ಹೇಳಿದ ಟಿನ್ನುಗಳಿಂದ ಮುಚ್ಚಿರುವದು ಹೊ ಳ್ಳೆಯಿದ್ದದನ್ನು ಕಂಡನು. ಆಗ ಮಾಲಿಕನು ಅವರ ಕೃತ್ಯವನ್ನು ಕುರಿತು ಖಂಡಿಸಿ ಆಕ್ಷೇಪಿಸಲು ಅದಕ್ಕೆ [illegible] ಅ ಯೋಗ್ಯವಾಗಿಯೂ, ಸ್ವರೂಪಕ್ಕೆ ರೆಯಿಲ್ವೇ ಲಾಫಿಗೆ ಅವಮಾನಕರವಾಗಿಯೂ ಯಿರುವ ಶಬ್ದಗಳಿಂದ ಅವರು ಅವನಿಗೆ ಪ್ರತ್ಯುತ್ತರ ಕೊಟ್ಟಲ್ಲ ದೆ ಕೂಡಲೇ ಆ ಅಂಶ ಪೋಲೀಸ್‌ನವರಿಗೆ ತಿಳಿಸಲ್ಪಡಲು, ಅವರು ರೆಯಿಲ್ವೇ ಉನ್ನತಾಧಿಕಾರಿಗಳಿಗೆ ರಿಪೋರ್ಟುಮಾಡಿದರು. ಈಗ ಈ ವಿಷಯದಲ್ಲಿ ಅವರ ಮುಖ್ಯ ನ್ಯಾಯತೀರ್ಪು [illegible] ಅಧಿಕಾರಿಗಳು ಇದಕ್ಕೆ ಸಂಬಂಧಪಟ್ಟವರನ್ನು ಕರೆದು ವಿಚಾರಿಸಿ [illegible] ಮುಂದೆ ಇಂತಾ ಅಯೋಗ್ಯವಾದ ಕೆಲಸಗಳು ಜರಗದಂತೆ ಮಾಡುವರೆಂದು ನಂಬುತ್ತೇವೆ. ಮೈಸೂರು ರೆಯಿಲ್ವೇಇಲಾಖೆಯವರು ಇಂತಾ [illegible] ನೌಕರರನ್ನು [illegible] ಸಾವು ರುಷ್ಟು ಮಾತ್ರವೂ ಅಷ್ಟಗ್ಯ ಪಡಬೇಕಾಗಿದ್ದಿಲ್ಲವು. [illegible] ಕ್ಕೆ [illegible] ಸಾಕರರ ತಿಲಬ್ ಕಡಮೆಯಾದ [illegible] ಗಿಲ್ಲ. ಅವರ [illegible] ಕಡಮೆಯಾಗುವದ ರೊಳಿಗೆ [illegible] ಸಂದೇಹಪಡಲಾಗದು. ಲೌಖ್ಯದಿಂದ [illegible] ಟ್ಟರೆ ಅಂತರ [illegible] ವಾಗುವದೇ ಯಿರುವದು. ರೆಯಿಲ್ವೇ ಯಿಲಾಖಾ ಸಾಕರ್ ನಾಗ ತಿಲಬ್‌ಗಳನ್ನು [illegible] ಟ್ರಸರಿಂದ [illegible] ಮಾಸೇಯಾ ನಾ [illegible] ತೆಲಬಿಗೆ ಮೇಲ್ಪಂಡವರಿಗೆ [illegible] ಮಾಡಿರ ಗಡದವರನ್ನು [illegible] ಸಂಪಾದಿಸಬಹುದು. ಆಷ್ಟರ [illegible] ವರು ಇಷ್ಟಕ್ಕಿಂತ ಮತ್ತೆಷ್ಟು ಯೋಗ್ಯರಾಗಿರುವರು? ಸ್ಟೇಟ್ ರೆಯಿಲ್ವೆಗೆ ಅಂತವರಿಂದಲೂ ಅಸ್ವರು [illegible] ? ಅಂತ ವರಿಂದ ಪ್ರಜೆಗಳಿಗೆ ಆವಧವಾದ [illegible] ಗಳುಂಟಾಗದೆ ಹೇಗೆ ಇರುವದು ? ಅನಶ್ಯ ಕಕಾಂಕ್ಷೆ [illegible] ಲೌಖ್ಯದಿಂದಲೂ ಅನಾವಶ್ಯಕ [illegible] ದಲ್ಲಿ ತೋರಿಸಲ್ಪಡುವ [illegible] ದಿಂದಲೂ [illegible] ಫಲವೇ [illegible] ಗಲೂ [illegible].

## Occasional Notes.

ನೈಮಿತ್ತಿಕ ವಿಷಯ ಪ್ರಾಪ್ತಿ.

———:0.———

Opium crop.—ಈವರ್ಷ [illegible] ಮುಲ್ಲ ಪ್ರದೇಶಗಳೊಳಗೂ, ಮುಖ್ಯವಾಗಿ ಬಂಗಾಳೀದೇ ಶದಲ್ಲಿ, ಅಫೀಂಫಸಲು, ಸಪ್ರೋನತ್ತಮವಾಗಿದ್ದಾ ಗಿರುವಂತೆಯೂ, ಅದರಿಂದ ಸರ್ಕಾರ್ ರೆವಿನ್ಯೂ ಅತ್ಯಧಿಕವಾಗಿ ಆಗಬಹುದೆಂದು ನಿರೀಕ್ಷಿಸಲ್ಪಟ್ಟಿರು ವಂತೆಯೂ ತಿಳಿಯಬರುತಿದೆ.

———

A fatal accident.—[illegible] ಕಾರಿಂಗ [illegible] ಆಸದಲ್ಲಿ [illegible] ದೇಶದಲ್ಲಿರ, [illegible] ದೇಶದೊಳು, ಕೆಲವರುಸೇರಿ ಯೋಗಗಾಡಿನಲ್ಲಿ ಕುಳಿತು ಮೇಲಕ್ಕೆ ಹೋಗುತ್ತಿರುವಲ್ಲಿ ರಥವು ಸಡಿಲಗೋಗಿ, ೧೭೦ ಅಡಿಗಳ ಯೆತ್ತರದಿಂದಬಿದ್ದು, ಅದರಲ್ಲಿ ಕುಳಿತಿದ್ದ ಇಪ್ಪತ್ತುಮಂದಿಯಲ್ಲಿಕೆ ಮೂವರು ಕೂಡಲೆ ಮೃತಪಟ್ಟರು. ಅನೇಕರಿಗೆ ಬಹಳ ಘಾವವು. ಈ ಅಪಾಯ ಸಂಭವಿಸುವದಕ್ಕೆ ರಥದಲ್ಲಿ ಅಧಿಕವಾಗಿ ಜನಗಳು ಕುಳಿತಿದ್ದದ್ದೇ ಕಾರಣ ವೆಂದು ತಿಳಿಯಬರುತ್ತದೆ.

A heavy storm.—ಅತಿ ಅದೃಶ್ಯವಾರದಲ್ಲಿ [illegible] ನಾಗಪುರ್ ಯೆಂಬ ಪಟ್ಟಣದಲ್ಲಿ [illegible] ಗುರುವಾರದೊಡನೆ, ಬಿರುಗಾಳಿ ಯೆಂಟುಘಂಟೆಗೆ ಪ್ರಾರಂಭವಾಗಿ, ಹಾಯಂಕಾಲ ೬ ಘಂಟೆಯವರೆಗೆ [illegible] ಮಳೆಬಿದ್ದಿತಲ್ಲದೆ, ಒಬ್ಬವರ್ತಕನಸ [illegible] ಒಂದು ಪಾರ್ಸಲ್‌ಗೋಡೆಗೆ ಸಿಡಿಲುಹೊಡೆದು ಅದು ಸೀಳಿ ಹೋಯಿತು. ಮನೆಯೊಳಗಿದ್ದ ಹೆಂಗಸರು ಮಕ್ಕಳೆಲ್ಲರು ಬಹಳ ದಿಗಿಲುಗೊಂಡರು. ಕಸ್ಟಂಹೌಸ್ ಗೋಪುರಕ್ಕೆ ಸಿಡಿಲುಹೊಡೆಯಿತು. ದೈವಾತ್ ಪ್ರಾಣಹಾನಿ ಯಾರಿಗೂ ಉಂಟಾಗಲಿಲ್ಲವು. ಎಂದು ವರ್ತಮಾನ ಪತ್ರಿಕೆ ಯಿಂದ ತಿಳಿಯಬರುತದೆ.

———

An editress.—ಇಂಡಿಯನ್ ಮಿರರ್ ಯೆಂಬ ಪತ್ರಿಕೆ ತಿಳಿಸುವದೇನಂದರೆ—ಬಂಗಾಳಿಭಾಷೆಯಲ್ಲಿ ಪ್ರಕಟಿಸಲ್ಪಡುವ ಭಾರತೀಯೆಂಬ ಉತ್ತಮವಾದ ಪತ್ರಿಕೆಗೆ, ಗೌರವ್ಯರಾದ ದೇವೇಂದ್ರನಾಥ ಟಾಗೂರ್ ಯೆಂಬವರ ಮಗಳಾದ ಶ್ರೀಮತಿ ಸ್ವರ್ಣಕುಮಾರಿ ದೇವಿಯೆಂಬಾಕೆಯು ಯೆಡಿಟರಾಗಿರುತ್ತಾಳೆ. ಉತ್ತಮವಾದ ಈ ಪತ್ರಿಕಾಲೇಖನಕಾರ್ಯ ದಕ್ಷತೆಯನ್ನು ನೋಡಲಾಗಿ ಆಕೆಯವರ ವಿದ್ಯಾ ಪ್ರೌಢಿಮೆಯುಕ್ತವಾದ ಯೋಗ್ಯತೆಯು ಕೇವಲ ಶ್ಲಾಘನೀಯವಾದದ್ದಾಗಿರುತದೆ, ಇಂಡ್ಯದೇಶದಲ್ಲಿ ಸ್ತ್ರೀ ವಿದ್ಯಾಭ್ಯಾಸಾಭಿವೃದ್ಧಿ ಯಲ್ಲಿ ವಿಶೇಷ ಅಕ್ಕರೆ ಯುಳ್ಳವರಿಗೆ ಮತ್ತು ತಿಳಿಸುವದೇನೆಂದರೆ, ಬಂಗಾಳೀದೇಶದ ಹೆಂಗಸರಲ್ಲಿ ಶ್ರೀಮತಿ ಸ್ವರ್ಣಕುಮಾರಿದೇವಿಯೊಬ್ಬಾಕೆಯಾಕೆ ಇಲ್ಲವೆ ವೃತ್ತಾಂತಪತ್ರಿಕಾಲೇಖನ ಕಾರ್ಯದಲ್ಲಿ ಪ್ರವೀಣರು ಗೌರವ್ಯ ನಾಗಿರತಕ್ಕವರನ್ನು ಅನೇಕರಿರುತ್ತಾರೆ. ರಮಾ ಸುಂದರೀದೇವಿ ಯೆಂಬಾಕೆಯೇ ಮೊದಲು ದೇಶ ಭಾಷೆಯಲ್ಲಿ ಒಂದು ವೃತ್ತಾಂತಪತ್ರಿಕೆಯನ್ನು ಪ್ರಕಟಿಸುವದಕ್ಕೆ ಪ್ರಾರಂಭಿಸಿ ಅದನ್ನು ಸರ್ವಜನ ಶ್ಲಾಘನೀಯವಾಗಿ ಅನೇಕಸಂವತ್ಸರಗಳ ಕಾಲ ನಡೆಸುತಬಂದಳು. ಆಕೆಯ ಮರಣಾನಂತರ ಆಕೆ ಯಕಂದನು ವಿದ್ಯಾವಂತರಾದ ಕಾವ್ಯವಿದ್ಯೋ [illegible] ಜಡ್ಜಿಯಾಧಿಕಾರದ ಕೆಲಸವನ್ನು ಬಿಟ್ಟು ವಿರಕ್ತನಾದನು. ಇದರಂತೆಯೇ ಇನ್ನು ಅನೇಕ ಮಂದಿ ಬಂಗಾಳೀಹೆಂಗಸರು ಯೋಗ್ಯವಾದ ಗ್ರಂಥ ಗಳನ್ನು ರಚಿಸಿ ವಿದ್ಯಾಗೌರವವಂ ಪಡೆದಿರುತ್ತಾರೆ ಎಂಬದು.

———

Native princes and their states.—ಇಂಡಿಯನ್ ಮಿರರ್ ಯೆಂಬ ಪತ್ರಿಕೆ ತಿಳಿಸುವದೇನಂದರೆ—ನೇಟಿವ್ ಸಂಸ್ಥಾನಗಳು ಕಾರ್ಯದಕ್ಷ ಅಭಿವೃದ್ಧಿಗೆ ಬರುವವರಿಗೆ ಇಂಡ್ಯ ರಾಜ್ಯವನ್ನು ಕುರಿತು ಪ್ರಶ್ನೆಗೆ ವಿಶೇಷ ಅವಕಾಶ ವಿರಲಾರದು. ನೇಟಿವ್ ಅರಸರು ವಿದ್ಯಾವಂತರಾಗಿ ತಮ್ಮಲ್ಲಿ, ತಮ್ಮ ಪ್ರಜೆಗಳ ಮತ್ತು ದೇಶದ ಸುಖ ಸ್ಥಿತಿಯೇ ತಮ್ಮ ಅಭಿವೃದ್ಧಿಗೆ ಕಾರಣವಾಗಿರುತದೆಂದು ತಿಳಿದು, ಅದರಂತೆ ವರ್ತಿಸುವದನ್ನು ನೋಡ ಬೇಕೆಂಬದೇ ಮನಃಪೂರ್ವಕವಾದ ನಮ್ಮ ಕೋರಿಕೆಯಾಗಿರುತದೆ. ಅರಸರು ತಮ್ಮ ರಾಜ್ಯಾಡಳಿತದ ವಿಷಯದಲ್ಲಿ ತಮ್ಮ ಪ್ರಜೆಗಳಿಗೆ ಸಂಪೂರ್ಣಾಭಿವೃದ್ಧಿಯಾದ ಒಂದು ಪದ್ಧತಿಯನ್ನವಲಂಬಿಸಿ ನಡಿಸಿಕೊಂಡುಬಂದರೆ ತಮ್ಮಾಳಿಕೆ ತಮ್ಮ ಅಧಿಕಾರಬಲವತ್ತರವಾಗಿ ರಾಜ್ಯವು ಸ್ಥಿರವಾಗಿ ನೆಲಗೊಳ್ಳುವದಕ್ಕೆ ಸಹಾಯಕವಾಗುವದಲ್ಲದೆ ಅವರ ರಾಜ್ಯವು ಅಭಿವೃದ್ಧಿಹೊಂದಿ ನಾಗರಿಕತೆಗೆ ಬರುವದು. ಈ ಅಂಶಗಳನ್ನು ಅವರು ತಿಳಿದುಕೊಳ್ಳಬೇಕು, ತಮ್ಮ ಸಂಸ್ಥಾನಗಳೂ ಪ್ರಜೆಗಳೂ ತಮ್ಮ ಸುಖಾನುಭವಕ್ಕಾಗಿಯೇ ಯೇರ್ಪಟ್ಟಿರೆಂದು ಭಾವಿಸಕೂಡದು, ತಮ್ಮ ಕರ್ತವ್ಯವನ್ನೂ ಜವಾಬ್ದಾರಿಯನ್ನೂ ಯಥಾರ್ಥವಾಗಿ ತಿಳಿದುಕೊಳ್ಳಬೇಕು, ಇಷ್ಟು ಮಾಡದಿದ್ದರೆ ಈಗಿನಂತೆಯೇ ಅವರು ರಾಜ್ಯಾಂಗದವರ ಅಗೌರವಕ್ಕೂ—

ಅಂತ್ಯದಲ್ಲಿ ಪಟ್ಟದ ರಾಣಿಯೂ ಯುವರಾಜ. ಮಾನ್ಯದರ್ಶಿಗಳಾದ ನೇಟಿವ್ ಅರಸರು ಕೆಲವರು ತಮ್ಮ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ಶಕ್ತರಾಗಿರುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಮತ್ತು ತಮ್ಮ ಉದ್ಯೋಗಗಳಲ್ಲಿ ಅನ್ಯರು ಪ್ರವೇಶಿಸುವುದಕ್ಕೆ ಅವಕಾಶ ಕೊಡುವದಿಲ್ಲವು. ಈ ಅರಸುಗಳಿಗೆ ನಿರೂಪವಾದ ಮತ್ತು ಅನುಕೂಲವಾದ ವಿದ್ಯಾಭ್ಯಾಸವಿಲ್ಲದೆ ಹೋದರೆ ಅದರಿಂದಲೇ ನೇಟಿವ್ ಸಂಸ್ಥಾನಗಳಲ್ಲಿ ನೆಲಸಿ... ಅನರ್ಥಗಳಿಗೆ ಅವಕಾಶವುಂಟಾಗುವದು. ನೇಟಿವ್ ಅರಸರು ಈಗ ಕಲಿಯುವ ವಿದ್ಯೆಯು ... ಅವರ ಪ್ರಜೆಗಳಿಗಾಗಲಿ ಪ್ರಯೋಜನಕಾರಿಯಾದದ್ದಲ್ಲವು. ಪರಂತು, ನಮ್ಮ ಅನುಭವದ ... ಅದರಿಂದ ಸಾಮಾನ್ಯೇನ ಹಾನಿಯುಂಟಾಗುತ್ತಿರುವದು.

---

Re-marriage.—ಪುಣೆಯಲ್ಲಿ ಕಳೆದ ಜ್ಯೇಷ್ಠ ... ಅಷ್ಟಮೀ ಸೋಮವಾರದ ದಿನ ನಾರಾಯಣರಾವ್ ಶ್ರೀ ಹರಿ ರಾವ್ ಜೀ ಟಿಪ್ ಣಿಸರ್ ಎಂಬ ... ವರ್ಷದ ವಯಸ್ಸಿನ ಬ್ರಾಹ್ಮಣರಲ್ಲಿರುವ ಸದ್ ಗೃಹಸ್ಥರ ಮತ್ತೊಂದು ಮನೆಯಲ್ಲಿ ಪುನರ್ವಿವಾಹ ಆಯಿತು. ಮದುವಣಿಗನಿಂತ ರಾಜಮಾನ್ಯ ರಾಜಶ್ರೀ ರಘುನಾಥ ಸೀತಾರಾಂ ಆಠ್ಲೆ ... ಇವರಿಗೆ ವಯಸ್ಸು ... ಇವರು ಕೊಲ್ಹಾಪುರ ಪ್ರಾಂತದ ಜನರು ... ಮಹಾರಾಷ್ಟ್ರ ... ಬಿ. ಎ. ... ವಯಸ್ಸು ... ಮತ್ತು ಪರಮೋತ್ಕರ್ಷ ... ಈಕೆ ... ಯವರ ... ಇವರ ಧರ್ಮಪತ್ನಿ ... ಈಗ ಮರಳಿ ವಿವಾಹವಾಯಿತು. ಮತ್ತೊಂದು ... ರಾವ್ ... ಶ್ರೀ ... ಬಾಬಾಸಾಹೇಬ ... ಮುಂಬಾಯಿ ... ಪುರದ ... ಕಾಲೇಜ್ ... ಪ್ರಿನ್ಸಿಪಾಲ್ ವಿಷ್ಣುಪಂತ ... ಸದರೀ ಸ್ಥಳದಲ್ಲಿ ಕಳೆದ ಮಂಗಳವಾರದ ದಿನ ... ವಿವಾಹ ... ಮೇಲ್ಕಂಡ ... ವಿವಾಹ ... ಸಮಯ ... ನಡೆದವು ... ಜನರು ... ಕುಲದೇವತೆ ... ಸಂಪ್ರದಾಯ ... ವಿವಾಹಗಳು ... ಸಂತೋಷಪಡುವಂತೆ ... ಆಗಿನ ... ಇಂಥ ... ಬೆಳಗಾಂ ... ಅಭಿಪ್ರಾಯ ... ಈ ಕಾಲದಲ್ಲಿ ಸ್ತ್ರೀಯರು ... ವಿಧವೆಯರಿಗೆ ... ಪ್ರಾರ್ಥನೆ ... ಕೊಳ್ಳುತ್ತೇವೆ.

## LOCAL AND PROVINCIAL NEWS.

ಜಿಲ್ಲೆಗಳ ಮತ್ತು ತಾಲ್ಲೂಕುಗಳ ವೃತ್ತಾಂತಗಳು.

---

Privilege leave.—ಶಿವಮೊಗ್ಗಾ ಡಿಸ್ಟ್ರಿಕ್ಟು ... ತಾಲ್ಲೂಕು ಅಮಲ್ದಾರ್ ... ಅವರು ... ಕೊಟ್ಟ ... ರಜಾ ಕೊಡಲ್ಪಟ್ಟಿರುವದು.

---

Investiture of powers.—ಶಿವಮೊಗ್ಗಾ ಸಬ್ ಡಿವಿಷನ್ ಮತ್ತು ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿಸ್ಟರ್ ಶ್ರೀನಿವಾಸರಂಗಂ ... ಮೊದಲನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿರುವದು. ... ಕ್ಲಾಸ್ ಮ್ಯಾಜಿಸ್ಟ್ರೇಟ್ ಮತ್ತು ... ಮೊದಲನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುವದು.

---

Mr. Plumer and the advocates.—ಮೈಸೂರು ಚೀಫ್ ಕೋರ್ಟು ಚೀಫ್ ಜಡ್ಜಿಯವರಾದ ಮಿ|| ಸಿ. ಜೆ. ಪ್ಲುಮರ್ ಅವರು ಇಲ್ಲಿನ ವಕೀಲರ ಸಂಬಂಧವಾಗಿ ಯೂರೋಪಿಯನ್ ಮತ್ತು ಯೂರೇಷಿಯನ್ ಅಡ್ವೋಕೇಟ್ಗಳಿಗೆಲ್ಲ ಕಳೆದ ... ಕೂಟ ... ಮಾಡಿದ ... ಮುಂದೆ ಆ ... ನೇಟಿವ್ ಅಡ್ವೋಕೇಟ್ಗಳಿಗೂ ... ಜಾತಿಪದ್ಧತಿಯನ್ನನುಸರಿಸಿ ಔತಣ ಮಾಡಿದರೆಂಬುದಾಗಿ ತಿಳಿಯಬರುತ್ತದೆ. ಇದು ಅನ್ಯೋನ್ಯತೆಗೆ ಕಾರಣವಾದ ಕಾರ್ಯವಾದದರಿಂದ ಶ್ಲಾಘ್ಯವಾಗಿರುವದು.

---

The season and prospect.—ಕಳೆದವಾರ ... ಬೆಂಗಳೂರಿನಲ್ಲಿ ಮಳೆಯು ... ಅದು ... ಕಳೆದವಾರದಲ್ಲಿ ... ಮತ್ತು ... ಬದಲಾಯಿಸಿ ... ಆರೋಗ್ಯಕರವಾಗಿಲ್ಲವು ... ಲಕ್ಷ್ಮೀರಮಣಸ್ವಾಮಿಯವರ ... ಅನೇಕ ಪ್ರದೇಶಗಳಲ್ಲಿ ... ಅಲ್ಪವೃಷ್ಟಿಯಾಗಿಯಾಯಿತು. ... ಅವಕಾಶವಿಲ್ಲದೆ ಹೋಗಿ ಮುಂದೆ ... ಪರಿಣಾಮವು ... ಕೃಷಿಕರಿಗೆ ... ಬಂದಿರುವದು. ... ಕೊಳೆಯುವ ... ಜಲಾಶಯಗಳಲ್ಲಿ ... ಕಾವೇರಿ ... ಮುಂದಿನ ... ಆನುಕೂಲವಾಗಿರುವದು. ಕೆಲವುಕಡೆ ... ಕೊಳ್ಳುತ್ತಿರುವದು. ಇಲ್ಲಿಯೂ ಕಾವೇರಿ ಮುಂತಾದ ನದಿಗಳಲ್ಲಿ ... ಮುಂದೆ ... ಆಗಬಹುದೆಂದು ಅವರು ತಿಳಿಯುವದಾಗಿ ... ಮಾಡುತ್ತಾರೆ.

---

A false charge.—ಒಬ್ಬ ಕೆಲವುದಿವಸ ... ಆನೇಕಲ್ ತಾಲ್ಲೂಕಿನಲ್ಲಿ ... ವಿಚಾರಣೆ ... ಮುಂಗಾರಿನಲ್ಲಿ ... ಪ್ರಾರಂಭವಾಗಿ ... ಮೃತಪಟ್ಟನೆಂದು ... ಪೊಲೀಸ್ ... ಸ್ಥಳ ... ಅದೇ ಗ್ರಾಮ ... ಎಕ್ಸ್ ಪ್ರೆಸ್ ಮೂಲಕ ... ಟೆಲಿಗ್ರಾಮ್ ... ಬೆಂಗಳೂರು ... ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ... ಮೃತಪಟ್ಟ ... ವಾಸ್ತವವೆಂದು ... ಕಾನೂನು ... ಮ್ಯಾಜಿಸ್ಟ್ರೇಟರು ಮುಂದೆ ... ಮ್ಯಾಜಿಸ್ಟ್ರೇಟರು ಅವನಿಗೆ ... ಕಮ್ಮಿಟ್ ಮಾಡಿದರು.

## NEWS LETTERS.

### *THE MYSORE FESTIVITIES.*

FROM OUR MOFUSSIL CORRESPONDENTS.

ಚಿಕ್ಕಮಗಳೂರು, ೧೮ನೇ ಜೂನ್ ೧೮೮೪.—ಶ್ರೀಮನ್ ಮಹಾರಾಜ ರಾಜರಾಜೇಶ್ವರ ಬಹದೂರವರಿಗೆ ಪುತ್ರೋತ್ಸವ ... ಚಿಕ್ಕಮಗಳೂರು ... ಕೌನ್ಸಿಲ್ ... ಡೆಪ್ಯುಟಿ ಕಮಿಷನರ್ ಮಿ. ... ಅಸಿಸ್ಟೆಂಟ್ ಕಮಿಷನರ್ ಮಿ. ... ಮೀಟಿಂಗ್ ... ಮಹಾರಾಜರ ... ನೇಟಿವ್ ... ಶ್ರೀಮದ್ ... ರಾಮಸ್ವಾಮಿ ... ಸುಬ್ಬರಾವ್ ... ಸರ್ ... ಮುನ್ಸಿಫ್ ... ದೇವಸ್ಥಾನಗಳಲ್ಲಿ ... ಪೂಜೆ ... ಬ್ರಾಹ್ಮಣ ಭೋಜನ ... ಸಾಯಂಕಾಲ ... ದೀಪಾಲಂಕಾರ ... ನಡೆದವು.

... ಕೋರ್ಟಿನ ... ಆಫೀಸರ್ ... ರಾಯರು ... ಗ್ರಾಮದಲ್ಲಿ ... ಸಂತೋಷ ... ನಡೆಸಿದರು.

---

ಬೇಲೂರು, ೧೮ನೇ ಜೂನ್ ೧೮೮೪.—ಶ್ರೀ ಮಹಾರಾಜರವರಿಗೆ ಪುತ್ರೋತ್ಸವವಾದ ಸಂತೋಷ ... ಚೆನ್ನಕೇಶವಸ್ವಾಮಿ ... ದೇವಸ್ಥಾನದಲ್ಲಿ ... ಬ್ರಾಹ್ಮಣರು ... ಪೂಜೆ ... ಸಾಯಂಕಾಲ ... ದೀಪೋತ್ಸವ ... ಉತ್ಸವ ... ನಡೆಯಿತು.

... ಸ್ವಾಮಿಗೆ ... ಅಲಂಕಾರವು ... ಬಹು ... ಉತ್ಸವ ... ಜನರು ... ಸಂತೋಷ ...

... ದೇವಸ್ಥಾನದಲ್ಲಿ ... ಸಂತರ್ಪಣೆ ... ನಡೆಯಿತು.

... ಸಾಯಂಕಾಲ ... ಮಹಾಜನರು ... ಮೆರವಣಿಗೆ ... ಸಂತೋಷ ... ಮಾಡಿದರು.

---

ಹರಿಹರಪುರ, ತಾ|| ೧೮ನೇ ಜೂನ್ ೧೮೮೪.—ಈ ಪ್ರಾಂತದಲ್ಲಿರುವ ... ಸಂತೋಷ ... ಶ್ರೀ ಶಾರದಾ ... ಮಠ ... ದೇವಸ್ಥಾನ ... ಶ್ರೀಮನ್ ಮಹಾರಾಜ ರಾಜರಾಜೇಶ್ವರ ... ಬಹದೂರವರಿಗೆ ಪುತ್ರೋತ್ಸವವಾದ ... ದೇವರಿಗೆ ... ನಡೆಯಿತು.

ನಿಮಿತ್ತವಾಗಿ ... ಶ್ರೀಮಂತ ಯುವರಾಜರಿಗೂ ಶ್ರೇಯಸ್ಸುಂಟಾಗಲೆಂದು ... ವೆಂಕಟರಮಣಸ್ವಾಮಿ ... ಸಂತೋಷ ... ಬ್ರಾಹ್ಮಣರಿಗೂ ... ಸಂತರ್ಪಣೆ ... ನಡೆಯಿತು.

ಶ್ರೀಮನ್ ಮಹಾರಾಜರವರಿಗೆ ... ಸಮರ್ಪಿಸಲ್ಪಟ್ಟ ... ವಿಜ್ಞಾಪನಪತ್ರಿಕೆ.

ಮಹಾಸ್ವಾಮಿ—ಈ ರಾಜ್ಯ ... ಮಹಾಸ್ವಾಮಿಯವರಿಗೆ ... ಪುತ್ರೋತ್ಸವವಾದ ... ನಡೆಸಿದೆವು ... ಅಮಲ್ದಾರ್ ... ಲಕ್ಷ್ಮೀನಾರಾಯಣ ... ಸೋಮೇಶ್ವರ ... ದೇವಸ್ಥಾನಗಳಲ್ಲಿ ... ಪೂಜೆ ... ಬ್ರಾಹ್ಮಣ ಸಂತರ್ಪಣೆ ... ಸಂತೋಷ ...

ನಾವು ಈ ಊರಿನಲ್ಲಿ ... ಯುವರಾಜ ... ಸಂಭ್ರಮ ... ವೆಂಕಟರಮಣ ... ಅಮಲ್ದಾರರು, ತಾಲ್ಲೂಕ್ ... ಶ್ರೀ ... ಮಹಾಸ್ವಾಮಿ ...

ಈ ದಿವಸ ... ಮಹಾಸ್ವಾಮಿಯವರಿಗೆ ... ಕಾರ್ಯ ... ಯುವರಾಜ ... ಆನಂದ ... ಪ್ರಾರ್ಥನೆ ... ಮಹಾಸ್ವಾಮಿ.

---

ಕುಣಿಗಲ್, ತಾ|| ೧೮ನೇ ಜೂನ್ ೧೮೮೪.—ಮಾಡಿ ... ಮಾಡಲ್ಪಟ್ಟಿತು.

ಶ್ರೀ ... ರಾಜರಾಜೇಶ್ವರ ... ಪುತ್ರೋತ್ಸವ ... ಸಂತೋಷ ... ಶ್ರೀ ... ದೇವಸ್ಥಾನ ...

[illegible]

## THE CIVIL SERVICE AGE AGITATION

[illegible]

BANGALORE.—Printed and published for the Proprietor, at the KARNATAKA PRESS.—1884.

CAN ARESE EDITION

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

Published every Monday Morning

ಶ್ರೀಮನ್ಮಹಿತಪ್ರಕೃತ್ಯುದಯಗಮಾಘರ್ಣಕರ್ಣಾಟಕಪ್ರಕಾಶನ ರಾಶಿ ... [illegible]

Vol. XI.] BANGALORE:—MONDAY, JULY 7, 1884. [No. 27.

ಸಂಪುಟ. ೧೧.] ಬೆಂಗಳೂರು:—ಸನ್ ೧೮೮೪ನೇ ಇಸವಿ ಜುಲೈ ೭ನೇ ತಾರೀಖ್ ಸೋಮವಾರ. [ಸಂಚಿಕೆ. ೨೭.

"ಕರ್ಣಾಟಕ ಪ್ರಕಾಶಿಕಾ"

ಪತ್ರಿಕೆಯ ಚಂದಾನಿರ್ಣಯ.

| | | |
|---|---|---|
| ಇಂಗ್ಲಿಷ್ ಮತ್ತು ಕನ್ನಡಸಹಿತ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... | | ೧೨—೦—೦ |
| ಇಂಗ್ಲಿಷುಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ... | | ೬—೦—೦ |
| ಕನ್ನಡಮಾತ್ರ ತೆಗೆದುಕೊಳ್ಳತಕ್ಕವರಿಗೆ ಮಾಮೂಲ್ ಮೇರೆ ವರುಷಕ್ಕೆ. | | ೬—೦—೦ |
| ತಿಂಗಳು | ೧ಕ್ಕೆ | ೦—೮—೦ |
| ಸಂಚಿಕೆ | ೧ಕ್ಕೆ | ೦—೪—೦ |
| ಹಿಂದಿನ ಸಂಚಿಕೆ | ೧ಕ್ಕೆ | ೦—೫—೦ |

ಷರಾ.—ಚಂದಾದಾರರು ಇಂಗ್ಲಿಷುಭಾಗವನ್ನಾಗಲಿ, ಕನ್ನಡಭಾಗವನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟಣೆಯ ರಿವಾಜ.

| | | |
|---|---|---|
| ಮೊದಲನೇದಫೆ ಪಂಕ್ತಿ | ೧ಕ್ಕೆ | ೦—೨—೦ |
| ಎರಡನೇದಫೆ ಪಂಕ್ತಿ | ೧ಕ್ಕೆ | ೦—೧—೦ |

## NOTICE TO SUBSCRIBERS.

ಇದರಡಿ ತಿಳಿಸಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರು ಮುಖ್ಯ ನಿಗೇಕೊಡಬೇಕೆಂದು ಕೋರುತ್ತೇವೆ ಏನೆಂದರೆ:—

೧. ಕರ್ಣಾಟಕಪ್ರಕಾಶಿಕೆಯ ಚಂದಾದಾರರಾಗಲಿಚ್ಛಿಸುವವರು ಮನಿಆರ್ಡರ್ ಮೂಲಕ ಹಣಕಳುಹಿಸಬೇಕು [illegible] ... ತಿಳಿಸತಕ್ಕದ್ದು. [illegible]

೨. ನೋಟುಗಳು ರವಾನಿಸತಕ್ಕವರು ಅರ್ಧನೋಟುಗಳನ್ನು ರವಾನಿಸಿಬಿಟ್ಟು ಉಳಿದ ಅರ್ಧನೋಟಿನ ವಿಷಯದಲ್ಲಿ [illegible] ... ರವಾನಿಸತಕ್ಕದ್ದು.

೩. ಸ್ಟಾಂಪುಗಳು ಕಳುಹಿಸತಕ್ಕವರು, ರೂ|| ೧ಕ್ಕೆ ೧ಆಣೆಮೇರೆ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಆಣೆಗಿಂತ ಜಾಸ್ತೀ ಕ್ರಯವುಳ್ಳ ಸ್ಟಾಂಪುಗಳನ್ನು ಕಳುಹಿಸಕೂಡದು.

೪. ಪತ್ರಿಕೆಯ ಸಾಲ್ ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ಆಖೈರಿಗೆ ಪೂರ್ತಿಯಾಗುವದರಿಂದ ಈ ಮಧ್ಯೆ ಯಾವತಿಂಗಳಲ್ಲಿ ಪತ್ರಿಕೆಗೆ ಚಂದಾದಾರರಾಗುವವರು ಆ ತಿಂಗಳು ಮೊದಲು ಡಿಸೆಂಬರ್ ಆಖೈರ್ ವರೆಗೆ [illegible] ಚಂದಾ ಕಳುಹಿಸಿಕೊಡಬೇಕೇ ಹೊರತು ಜಾಸ್ತಿಯಾಗಿ ಕಳುಹಿಸಲು ಆವಶ್ಯಕವಿಲ್ಲವು.

## ADVERTISEMENTS.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡಗ್ರಂಥಗಳು ಬೆಂಗಳೂರು ಕರ್ಣಾಟಕಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತ್ತವೆ,—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

| | |
|---|---|
| ಕಾಲಾಮೃತ. ... | ೧—೪—೦ |
| [illegible] ... | ೦—೧೨—೦ |
| ಛಪ್ಪನ್ನ (ಷಟ್ಪಂಚಾಶತ್) ... | ೦—೩—೦ |
| [illegible] ... | ೦—೫—೦ |
| [illegible] ... | ೦—೪—೦ |
| ಶಿವಗೀತೆ ... ... | ೦—೧೪—೦ |
| ಶಿವಾನಂದಲಹರಿ. ... | ೦—೬—೦ |
| ಕಾಲಗ್ರಹ. ... ... | ೦—೨—೦ |
| ವೈದ್ಯಸಾರಸಂಗ್ರಹ ... | ೫—೦—೦ |

ಕನ್ನಡಗ್ರಂಥಗಳು.

| | |
|---|---|
| ಹನುಮದ್ವಿಲಾಸ. ... | ೦—೬—೦ |
| ಶಾರೀರಶಾಸ್ತ್ರಸಾರಿಣಿಯು. ... | ೦—೪—೦ |
| ಸುಭದ್ರಾಕಲ್ಯಾಣ ... | ೦—೩—೬ |
| ಸುಧಾಮಚರಿತ್ರೆ. ... ... | ೦—೨—೬ |
| ಬಬ್ರುವಾಹನಸಂಗ್ರಹ. ... | ೦—೪—೦ |
| ಅಭಿಮನ್ಯುಕಾಳಗ. ... | ೦—೨—೬ |
| ಯಕ್ಷಗಾನನಳಚರಿತ್ರೆ ... | ೦—೬—೦ |
| ಶ್ರೀಕಾಳಿಪಂಚವಿಂಶತಿ. ... | ೦—೨—೬ |
| ಪಂಚಶಾಸ್ತ್ರಮಾಲಿಕೆ. ... | ೦—೬—೩ |
| ಕಾಳೀಯಮರ್ದನ. ... | ೦—೩—೦ |
| ಐರಾವತ. ... ... | ೦—೨—೦ |
| ಹರಿಶ್ಚಂದ್ರಸಾರ. ... | ೦—೦—೯ |
| ಇಂಗ್ಲಿಷುಕನ್ನಡಸೇರಿದಮಹಮ್ಮದರ್ ಲಾ | ೧—೦—೦ |
| ಜ್ಞಾನಸಿಂಧು, ... ... | ೨—೦—೦ |
| ಭ್ರಾಂತಿವಿಲಾಸ. ... | ೦—೧೨—೦ |
| ಶುಕಸಪ್ತತಿ ... | ೩—೪—೬ |
| ವೃಷಭೇಂದ್ರವಿಜಯ. ... | ೩—೪—೬ |
| ಆರೇಬಿಯನ್ ನೈಟ್ ಎಂಬಕಥೆ. | |
| ೧ನೇ ಸಂಚಿಕೆ. ... | ೦—೮—೦ |
| ಡಿಟ್ಟೋ ೨ನೇ ಸಂಚಿಕೆ. | ೦—೮—೦ |
| ಶಂಕರಶಂಕರವಿಲಾಸ. ... | ೦—೮—೦ |

ಸಂಸ್ಕೃತ ಮೂಲಗ್ರಂಥಗಳು.

| | |
|---|---|
| ಭಗವದ್ಗೀತೆ ... ... | ೦—೩—೦ |
| ವಿಷ್ಣುಸಹಸ್ರನಾಮ. ... | ೦—೫—೦ |
| ಸೂರ್ಯಸಹಸ್ರನಾಮ. ... | ೦—೨—೬ |
| [illegible] ... | ೦—೨—೬ |
| [illegible] ... | ೦— —೬ |
| ಶ್ರೀಕಾಂಡ [illegible] ... | ೦—೩—೬ |
| ೧ ಕಾಂಡ ಅಮರ. ... | ೦—೧—೦ |

ಮೇಲೆ ವಿವರಿಸಿದ ಕ್ರಯದಲ್ಲಿ ಅಂಚೇ ಹಾಸಲ್ ಸೇರಿರುವದಿಲ್ಲವು.

ಷರಾ.—ಮೇಲೆ ಹೇಳಿದ ಪುಸ್ತಕಗಳು ಬೇಕಾದವರು ಅವನ್ನು ಕಳುಹಿಸತಕ್ಕವರು ಬಾಕಿ ಹಾಸಲ್ ಸಹ ಸೇರಿಸಿ ಕಳುಹಿಸಬೇಕು. ಇಲ್ಲವಾದರೆ [illegible] ಕೊಡಬೇಕಾಗುವದು.

## NOTICE.

## VAIDYASARASANGRAHA.

☞ Price including Postage, Rs. 5-6-0

ಈ ಗ್ರಂಥಾಪೇಕ್ಷೆಯುಳ್ಳವರು ಹಣವನ್ನು ಕೂಡಲೇ ಕಳುಹಿಸತಕ್ಕದ್ದು. [illegible]

| | |
|---|---|
| ಕ್ರಯ ... ... | ರೂ|| ೫—೦—೦ |
| ಪಾಕಿಂಗ್ ಮತ್ತು ಅಂಚೇಹಾಸಲ್ | ೦—೬—೦ |

ಟಿ. ಬಿ. ವೆಂಕಟಾಚಾರ್, ಆಸ್ಪತ್ರೆ ರೋಡ್, ಬೆಂಗಳೂರು

ಪ್ರಕಟನೆ

ಕರ್ಣಾಟಕ ಮುದ್ರಾಕ್ಷರಶಾಲೆಯಲ್ಲಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಬೇಕಾದ ಕೆಲಸಗಳು ಸುಲಭವಾಗಿಯೂ ಶೀಘ್ರವಾಗಿಯೂ ಮಾಡಿಕೊಡಲ್ಪಡುತ್ತೆ. ಯಾವತರವಾದ ಕೆಲಸವನ್ನಾಗಲಿ ಮಾಡಿಸುವ ಅಪೇಕ್ಷೆಯುಳ್ಳವರು [illegible] ತಿಳಿಸತಕ್ಕದ್ದು. ಅವರು [illegible] ನಂಬರ್ ಮನೆಯೊಳು ಇರುತ್ತಾರೆ.

## NOTICE.

ಹೊಸಪುಸ್ತಕಗಳು!! ಹೊಸಪುಸ್ತಕಗಳು!!!

ಅವಶ್ಯಕವಾಗಿ,

ಪ್ರತಿಗೃಹಸ್ಥರಮನೆಯಲ್ಲಿಯೂ

ಇರಬೇಕಾದ ಬಿ. ವೆಂಕಟಾಚಾರ್ಯರಿಂದ

ಪ್ರಣೀತವಾದ

ಕನ್ನಡ ವಾಕ್ಯಕಾವ್ಯಗಳು.

| | | |
|---|---|---|
| ಶಕುಂತಳಾಕ್ರಯ | ೧೦ಆಣೆ | ಅಂಚೇಹಾಸಲ್ ೧ಆಣೆ |
| ಭಾರತಮಹಿಳಾ | ೧೨ | ಡಿಟ್ಟೋ |
| ಸೀತಾವನವಾಸ | ೧೨ | ಡಿಟ್ಟೋ |
| ಭ್ರಾಂತಿವಿಲಾಸ | ೧೨ | ಡಿಟ್ಟೋ |

ಇವು ಬೆಂಗಳೂರು ಸುಲ್ತಾನ್‌ಪೇಟೆಯಲ್ಲಿರುವ ನ್ಯಾಷನಲ್ ಹಾಲ್ ಲಿಂಗಯ್ಯರ್ ಅಂಡ್ ಸ್ರೋತ್ಸ್ ಯವರಲ್ಲಾಗಲಿ, ಅಥವಾ ಇದರಡಿ ರುಜುಮಾಡಿರುವವರಲ್ಲಾಗಲಿ ದೊರೆಯುವವು.

ಬಿ. ವೆಂಕಟಾಚಾರ್,

ಶಿರಸ್ತೇದಾರ್, ಡಿ|| ಕೋರ್ಟು

ಶಿವಮೊಗ್ಗ.

ನೋಟಿಸ್.

ಅರಮನೆ ಇಲಾಖಾ ಅಸಿಸ್ಟೆಂಟ್‌ಕಮ್ಮಿಷನರ್ ಆಫೀಸಿನಿಂದ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನೆಂದರೆ.—ಕೆಲವು ಪ್ರೈವೇಟ್ ಜನಗಳ ಸಾಲಗಳನ್ನು ನಿವರ್ತಿ ಮಾಡುವದಕ್ಕೋಸ್ಕರ (೬೦೦೫೩) ಅರವತ್ತುಸಾವಿರದ ಯೆಪ್ಪತ್ತು ಮೂರು ರೂಪಾಯಿ ಅಂದಾಜಾವುಳ್ಳ ಜವಾಹಿರ್ ವಗೈರೇ ಒಡವೆಗನ್ನು ಸನ್ ಮಜಕೂರ್ ಜುಲೈ ತಾರೀಖ್ ೧೫ನೇ ಮಂಗಳವಾರ ದಿವಿ ೧೨ ಘಂಟೇ ಲಾಗಾಯತು ಮತ್ತು ಅದರ ಮುಂದಣದಿನಗಳಲ್ಲು ಸಹ ಮೈಸೂರು ಅರಮನೆ ಖಜಾನೇ ಬಳಿ ಹರಾಜ್ ಮಾಡಿಸುವದರಿಂದ ಇಚ್ಛೆಯುಳ್ಳ ಜನಗಳು ಬಂದು ಕ್ರಯದರಖಾಸ್ತಿನಲ್ಲಿ ಪಡೆದು ತತ್ಕ್ಷಣ ಐವಜನ್ನು ಹಾಜರ್ಮಾಡಬೇಕು. ಒಡವೆಗಳವಿವರ ಮೈಸೂರು ಗೆಜೆಟಿನಿಂದ, ಅಂದರೆ, ಗೆಜೆಟ್ಟಿನ ಕನ್ನಡಭಾಗದಲ್ಲಿ ಗೊತ್ತಾಗುತ್ತೆ ತಿಳಿಯುವದು.

೨೮-೬-೮೪ } E CHIDAMBARAIYA.
ಮೈಸೂರು. }

ಪ್ರಕಟನೆ.

ಇಂಡಿಯನ್ ಲಿಮಿಟೇಷನ್ ಆಕ್ಟುಗಳಿಗೆ

ವ್ಯಾಖ್ಯಾನವು.

ಬೆಂಗಳೂರು ಮುನ್‌ಸಫ್ ಯೆಂ. ರಾಮಸ್ವಾಮೈಯ್ಯರವರಿಂದ,

ಹೊಸದಾಗಿ ಛಾಪಾಗಿ ಮಾರುವದಕ್ಕೆ ಸಿದ್ಧವಾಗಿದೆ.

ಪ್ರತಿ೧ಕ್ಕೆ ಹಾಸಲ್‌ಬೇಖೇರ... ೨—೪—೦

ಪುಸ್ತಕಬೇಕಾದವರು ಬೆಂಗಳೂರು ಚಿಕ್ಕಪೇಟೆಯಲ್ಲಿ ೨೧ನೇ ನಂ|| ಮನೆಯಲ್ಲಿರುವ ಡಿ. ವಿ. ರಾಮಸ್ವಾಮಯ್ಯನವರಿಗೆ ಅಯಿವಜ್ ಸಹಿತ ಬರೆದುಕೊಳ್ಳಬೇಕು.

ಪೋಸ್ಟೇಜಲೇಬಿಲ್‌ಗಳು ಕಳುಹಿಸುವವರು ರೂಪಾಯಿಗೆ ಒಂದಾಣೇಪ್ರಕಾರ ಡಿಸ್ಕೌಂಟ್ ಕಳುಹಿಸಬೇಕು.

## THE KARNATAKA PRAKASIKA

ಕರ್ಣಾಟಕಪ್ರಕಾಶಿಕಾ.

MONDAY, JULY 7, 1884.

*DEPOSITS FROM TREASURERS.*

ಸರ್ಕಾರಿ ನೌಕರರು ತಾವು ಮಾಡುವ ಕೆಲಸಕ್ಕಾಗಿ ನ್ಯಾಯ್ಯವಾದ ಸಂಬಳವನ್ನು ಪಡೆಯುತ್ತಾರೆ. ಪರಸ್ಥಳಗಳಿಗೆಹೋಗಿ ನೌಕರೀಮಾಡುವದಕ್ಕೆ ಭತ್ತಾ, ಮೈಲೇಜ್, ಟೆಂಟೇಜ್, ಎಂಬ ಜಾಸ್ತೀ ರುಸುಂಗಳು ಪಡೆಯುತ್ತಾರೆ. ಈರೀತಿಯಾವ ಸಂಬಳಗಳೂ, ರುಸುಂಗಳೂ ಅವರವರ ದರ್ಜಾ ಮತ್ತು ನೌಕರಿಗೆ ಅನುಸಾರವಾಗಿರುತಿವೆ. ಇವರು ಮಾಡುವ ನೌಕರಿಯಕಾಲ ಮತ್ತು ಮೆಹನತ್ತನ್ನನುಸರಿಸಿ ಪೆನ್ಷನ್‌ಗಳು ಕೊಡಲ್ಪಡುತಿವೆ. ಈಕಾಲದಲ್ಲಿ, ಕೇವಲ ನೌಕರೀ ಮಾಡಿದ ಕಾಲವನ್ನನುಸರಿಸಿ ಪೆನ್ಷನ್‌ಗಳು ಕೊಡಲ್ಪಡುತವೆಯೇ ಹೊರತು ಮೆಹನತ್ತನ್ನನುಸರಿಸಿ ಅಲ್ಲವು, ಪರಂತು ಪೆನ್ಷನ್‌ಕೊಡುಗಕಾಲದಲ್ಲಿ ಮೆಹನತ್ತಿಗಾಗಿಯೇ ಕೊಡಲ್ಪಡುವಂತೆ ಸರ್ಕಾರದವರು ಬರವಣಿಗೆಯಮೂಲಕ ಹುಕುಂ ಕೊಡುತ್ತಾರೆ. ನೌಕರಿಯಂಬಿಟ್ಟ ತಾರೀಖ್ ಮೊದಲು ಪೆನ್ಷನ್ ಪಡೆಯುವದರಿಂದ ಆ ತಾರೀಖಿನವರಿನಿಗೆ ಮಾಡಿದ ನೌಕರಿಯು ಯೋಗ್ಯವಾದದ್ದು ಅಥವಾ ನ್ಯಾಯ್ಯವಾದದ್ದೆಂಬದನ್ನು ಮರಳಿ ಹೇಳಬೇಕಾದ್ದಿಲ್ಲವಷ್ಟೆ. ಈಚೆಗೆ ಇಂಡ್ಯಗವರ್ನಮೆಂಟಿನವರು ಇದರಡಿಕಂಡಂತೆ ಹುಕುಂಕೊಟ್ಟಿರುತ್ತಾರೆ:—

"ಖಜಾನ್‌ಚಿಗಳು ಮತ್ತು ಇತರನೌಕರರಿಂದ ತೆಗೆದುಕೊಳ್ಳಲ್ಪಡುವ ಜಾಮೀನುಗಳು [illegible] ... ಇಂಡ್ಯಗವರ್ನಮೆಂಟಿನವರಿಂದ ನಿರ್ಣಯಿಸಲ್ಪಟ್ಟಿದೆ. ಖಜಾನ್‌ಚಿಗಳು ತಮ್ಮ ನೌಕರಿಯಂಬಿಟ್ಟುಹೋದಮೇಲೆ, ಅವರ ನೌಕರಿಯಕಾಲದಲ್ಲಿ ಅವರಿಂದ ಏನಾದರು [illegible] ... ಆಡಲ್ಪಟ್ಟಿತು."

ಮಸಲಾ, ಮೈಸೂರು ಸಂಸ್ಥಾನದಲ್ಲಿ ಡಿಸ್ಟ್ರಿಕ್ಟ್ ಖಜಾಂಚಿಗಳು, ತಾಲ್ಲೂಕು ಶಿರಸ್ತೇದಾರರು, ಸರಾಫ್ ಮೊದಲಾದವರು ತಮ್ಮ ನೌಕರಿಗಾಗಿ ಜಾಮೀನ್ ಅಥವಾ ಠೇವಣಾತಿಗಳು ಕೊಟ್ಟಿರುತ್ತಾರೆ. ಟ್ರೆಜರೀ ಆಫೀಸರ್ ಮತ್ತು ತಾಲ್ಲೂಕು ಅಮಲ್‌ದಾರ್, ಇವರ ಹುಕುಂಇಲ್ಲಾ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಟ್ರೆಜರೀಗಳಲ್ಲಿ ಹಣದಜಮಾ ಖರ್ಚೀ ಆಗುವದಿಲ್ಲವು. ಟ್ರೆಜರರ್ ಮತ್ತು ತಾಲ್ಲೂಕು ಶಿರಸ್ತೇದಾರರು ವಗೈರೇರಿಂದ ಜಾಮೀನ್ ಪಡೆಯುವದಕ್ಕೆ ಉದ್ದೇಶವೇನೆಂದರೆ, ಖಜಾನೇಯಲ್ಲಿರುವ ಹಣವನ್ನು ಅವರು ಜೇಬಿನಲ್ಲಿ ಹಾಕಿಕೊಂಡು ಮನೆಗೆಹೋದರೆ ಅದನ್ನು ಬರಮಾಡಿಕೊಳ್ಳುವದಕ್ಕಾಗಿಯೇಹೊರತು ಬೇರಿಲ್ಲವು. ಹ್ಯಾಗೆಂದರೆ, ಜಮೆಯನ್ನು ಕಮ್ಮಿಆಗಿಯೂ ಖರ್ಚನ್ನು ಜಾಸ್ತೀ ಆಗಿಯೂ ಲೆಕ್ಕಬರೆಯುವ ಅಧಿಕಾರ ಇವರಿಗೆ ಯಿರುವದಿಲ್ಲವು. ಆದದರಿಂದ ಇವರು ತಮ್ಮವರ

ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರಿಗೂ, ಮಿಲಿಟರಿ ಇಲಾಖೆಯವರಿಗೂ ಹುಕುಂ ಕಳುಹಿಸಲ್ಪಟ್ಟಿದೆ. ಇದಲ್ಲದೆ ಸ್ಟೇಷನ್ ಪ್ಲಾಟ್ ಫಾರಂನಲ್ಲಿ ಮುಂಚಿತವಾಗಿ ಕಾದಿದ್ದು ಮಹಾರಾಜರವರನ್ನು ಬರಮಾಡಿಕೊಳ್ಳಬೇಕೆಂದು ಇಲ್ಲಿನ ಮ್ಯುನಿಸಿಪಲ್ ಕಮ್ಮಿಷನರ್‌ಗಳಿಗೂ, ನೇಟಿವ್ ಮತ್ತು ಯೂರೋಪಿಯನ್ ಆಫೀಸರ್‌ಗಳಿಗೂ ಪ್ರಮುಖರಾದ ಇತರರಿಗೂ ತಿಳಿಸಲ್ಪಟ್ಟಿದೆ. ಮಹಾರಾಜರವರೊಡನೆ ದಿವಾನರೂ ಅವರ ಸೆಕ್ರೆಟರಿಯವರೂ ಬರುವರು. ಮಹಾರಾಜರವರು ಇನ್ನೂ ಒಂದೆರಡು ದಿನಗಳ ಕಾಲ ಈ ಪುರದಲ್ಲಿಯೇ ದಯಮಾಡಿಸುವರೆಂದು ತಿಳಿಯಬರುತಿದೆ.

---

The weather—ಕಳೆದವಾರದಲ್ಲಿ ನಾವು ತಿಳಿಸಿದಂತೆ ಮೋಡವಾದುದರ ಪರ್ಜನ್ಯ ಸೂಚನೆಗಳು ತೋರಬರುತ್ತಲಿವೆ. ಪಗಲು ಇರುವವರೆಗೂ ಬಿಸಿಲು ಬರಲಿಲ್ಲವು. ಪ್ರಾತಃಸಾಯಂಕಾಲ ವೇಳೆಗಳಲ್ಲಿ ಹವಾ ಸುಖಕರವಾಗಿಯೂ ಮನೋಹರವಾಗಿಯೂ ಇದೆ. ಧಾರಣೆ ನಾಸಿ ಮೋಡದಾರದಂತೆ ಜಾಸ್ತಿಯಾಗುತಲಿದೆ. ಇನ್ನೂ ಎರಡು ದಿನಗಳ ರೀತಿ ಮಳೆಬಾರದಿದ್ದರೆ ಜಿನಿಸಿಗಳ ಧಾರಣೆಯು ಬಹಳ ಏರುವಾ ಸಂಭವವುಂಟೆಂದು ತೋರುತಿದೆ.

---

The Bench and Bar—ಮೈಸೂರು ಚೀಫ್ ಕೋರ್ಟಿಗೆ ಸಂಬಂಧಪಟ್ಟ ಯೂರೋಪಿಯನ್ ಮತ್ತು ಯೂರೇಷಿಯನ್ ಅಡ್ವೊಕೇಟ್‌ಗಳಿಗೆ ಮೆ|| ಸ್ವಾಮಿಯವರು ಉಲ್ಲಾಸಪೂರ್ವಕ ಔತಣಮಾಡಿಸಿದರೆಂದು ಚಿಂತನವಾರ್ತೆ ತಿಳಿಸಿರುವದಲ್ಲದೆ, ಮಾಗನೇಜಿ ಜಡ್ಜಿಯವರಾದ ಮೆ|| ರಾವಬಹದ್ದೂರ್‌ರವರು ಕೂಡ ಜಡ್ಜಿಯವರಂತೆ ನೇಟಿವ್ ಅಡ್ವೊಕೇಟ್‌ಗಳಿಗೆಲ್ಲ ಔತಣ ಮಾಡಿಸಬೇಕೆಂಬ ಔತ್ಸುಕ್ಯವುಳ್ಳವರಾಗಿರುವಂತೆ ಕೇಳುವದಕ್ಕೆ ಸಂತೋಷಿಸುವೆವು.

---

Mr. W. A. Porter, M. A.—ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯಾದ ಮೆ|| ಪೋರ್ಟರ್ ಯವರು ಈ ಸಂದರ್ಭಗಳಲ್ಲಿ ತಮ್ಮ ಕೆಲಸದಿಂದ ನಿವೃತ್ತರಾಗುವರಾಗಿದಾರೆಂದು ಮೈಸೂರಲ್ಲಿ ಪುಕಾರೆ ಹುಟ್ಟಿರುವಂತೆ ಬೆಂಗಳೂರಿನ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ. ಹಿಂದೆ ಮೆ|| ಪೋರ್ಟರ್ ಯವರು ತಮ್ಮ ಕೆಲಸವನ್ನು ಬಿಟ್ಟು ಇಂಗ್ಲಾಂಡಿಗೆ ಹೊರಟುಹೋಗಿದ್ದಾಗ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಕೆಲಸಕ್ಕೆ ಅವರೇ ಲಾಯಖಾದವರೆಂದು ಯೋಚಿಸಿ ಮರಳಿ ಕರೆಯಿಸಲ್ಪಟ್ಟರು. ಇವರು ಇಲ್ಲಿಗೆ ಬಂದು ಬಹಳ ದಿವಸವಾಗಿಲ್ಲವು. ಹೀಗಿರುವಲ್ಲಿ ಇಷ್ಟು ಶೀಘ್ರದಲ್ಲಿ ವಾಪಸ್ ಹೋಗುವರೆಂಬುದು ಮಿಥ್ಯವೆಂದು ತೋರುತಿದೆ. ಒಂದು ವೇಳೆ ನಿಜವಾಗಿದ್ದರೆ ಇಂಥಾ ಸಮರ್ಥರಾದ ಸೆಕ್ರೆಟರಿಯನ್ನು ಕಳೆದುಕೊಳ್ಳುವದಕ್ಕೆ ಮಹಾರಾಜರೇ ವ್ಯಸನಪಡುವರೆಂದು ನಂಬುತ್ತೇವೆ.

---

The Madras Governor,—ಮದರಾಸ್ ಗವರ್ನರರಾದ ಘನವನ್ನುಹೊಂದಿದ ರೈಟ್ ಆನರೆಬಲ್ ಎಂ. ಇ. ಗ್ರಾಂಟ್ ಡಫ್ ಯವರು ಮುಂದಿನವಾರದಲ್ಲಿ ಈ ಪುರಕ್ಕೆ ಬಂದು ಇಲ್ಲಿಂದ ಮೈಸೂರು ಪ್ರಾಂತಕ್ಕೆ ದಯಮಾಡುವರೆಂದು ತಿಳಿಯಬರುತಿದೆ. ಮದರಾಸ್ ಮಿಲಿಟರಿ ಡಿಪಾರ್ಟ್‌ಮೆಂಟ್ ಆಫೀಸುಗಳನ್ನು ಈ ಪುರಕ್ಕೆ ಬದಲಾಯಿಸುವ ವಿಷಯದಲ್ಲಿ ಇಲ್ಲಿನ ಸ್ಥಳಾನುಕೂಲ್ಯವನ್ನು ಸ್ವತಃ ಪರೀಕ್ಷೆಮಾಡುವ ಉದ್ದೇಶದಿಂದ ಗವರ್ನರವರು ಇಲ್ಲಿಗೆ ಬರುವಂತೆ ತಿಳಿಯಬರುತಿದೆ. ಮದರಾಸ್ ಗವರ್ನಮೆಂಟಿಗೆ ಸೇರಿದ ಫಾರೆಸ್ಟುಗಳು ಕೆಲವು ಮೈಸೂರು ಸರಹದ್ದುಗಳಲ್ಲಿರುವದರಿಂದ ಅವುಗಳ ಅದಲುಬದಲಾಯಿಸುವಿಕೆಗಾಗಿ ನಾನೇ ತಾರೀಖಿನಲ್ಲಿ ಡಿಸ್ಟ್ರಿಕ್ಟಿಗೆ ಸೇರಿದ ಅಮಾನಿ ಕಸಬಾಗಳಲ್ಲಾರಿಗೆ ಮೈಸೂರು ಹಸ್ತಾಂತರವಾಗಿ ಹೋಗುವಂತೆ ನಿಷ್ಕರ್ಷೆಯಾಗಿರುವದರಿಂದ ಆಬಗ್ಗೆ ಗವರ್ನರವರ ಸೂಚನೆಗಳು ಮುಂಚಿತವಾಗಿ ಸದರೀ ಸ್ಥಳಕ್ಕೆ ಕಳುಹಿಸಲ್ಪಟ್ಟಿರುತಿವೆ.

---

The late jail disturbance.—ಈ ಪುರದ ಸೆಂಟ್ರಲ್ ಜೈಲ್‌ನಲ್ಲಿ ಈಚೆಗೆ ಕೆಲವು ದಿವಸಗಳ ಹಿಂದೆ ಆಂದೋಲನವೂ ದ್ವೇಷದಿಂದ ವಾಪಸ್ ಬಂದ ಕೆಲವರು ಖೈದಿಗಳು ಕಿರಿಕಿರಿಮಾಡಿ ಜುಲುಮೆನಡಿಸಿದರೆಂದು ವಾಚಕರಿಗೆ ಪೂರ್ವದಲ್ಲಿ ತಿಳಿಸಿದ್ದೆವಷ್ಟೆ. ಆ ಕಾಲದಲ್ಲಿ ಸದರೀ ಖೈದಿಗಳ ಗದ್ದಲವನ್ನು ಅಡಗಿಸಿದ ಪ್ರಸಂಗದಲ್ಲಿ ಜೈಲರೂ ಇತರ ಜೈಲ ಉದ್ಯೋಗಸ್ಥರೂ ಮಾಡಿರುವ ಸಹಾಯವು ದಿವಾನರವರ ನೋಟೀಸಿಗೆ ಬಂದು ಅವರು ಮೇಲೆ ಕಂಡ ನೌಕರರಿಗೆ ಇನಾಂ ಕೊಡತಕ್ಕದ್ದಾಗಿ ಸ್ಯಾಂಕ್ಷನ್ ಮಾಡಿರುವಂತೆ ತಿಳಿಯಬರುತಿದೆ. ಸಂದರ್ಭಾನುಸಾರವಾಗಿ ಹೀಗೆ ನೌಕರರ ಮೆರಿಟ್‌ಗಳು ಆಗಿಂದಾಗ್ಯೆ ಉಚಿತವಾಗಿ ಮೇಲ್ಪಟ್ಟ ಅಧಿಕಾರಿಗಳಿಂದ ಪುರಸ್ಕರಿಸಲ್ಪಡುತಲಿದ್ದರೆ ಅವರಿಗೆ ಉತ್ಸಾಹವುಂಟಾಗಿ ಸರ್ಕಾರ್ ಕೆಲಸಗಳನ್ನು ಅಕ್ಕರೆಯೊಡನೆ ನಿರ್ವಹಿಸಲಿಕ್ಕೆ ಕಾರಣವಾಗುವದು.

---

Registrar, Chief Court.—ಇಲ್ಲಿನ ಚೀಫ್ ಕೋರ್ಟಿನ ಓ. ರಿಜನೆರ ಸ್ಥಿದೆನೊಳು ಮಾಡಲ್ಪಟ್ಟ ಬದಲಾವಣೆಯ ಯೇರ್ಪಾಡಿನಲ್ಲಿ ಸದರೀ ಕೋರ್ಟು ರಿಜಿಸ್ಟ್ರಾರಾದ ಮೆ. ಹೇಮಾಜಿರಾಯರವರ ಸಂಬಳ ೪೦೦ ರೂಪಾಯಿಗಳಿಂದ ೫೦೦ ರೂಪಾಯಿಗಳಿಗೆ ಜಾಸ್ತೀ ಮಾಡಲ್ಪಟ್ಟಂತೆಯೂ, ಈ ಇಜಾಫೆಯು ಅವರಿಗೆ ಈಚಿಗೆ ಪ್ರಾಪ್ತವಾದ ಕಾರ್ಯಬಾಹುಳ್ಯವನ್ನು ಪರ್ಯಾಲೋಚಿಸಿ ಕೊಡಲ್ಪಟ್ಟದ್ದಾಗಿಯೂ ಕೇಳುತ್ತೇವೆ. ಚೀಫ್ ಕೋರ್ಟಿಗೆ ಇಬ್ಬರು ರಿಜಿಸ್ಟ್ರಾರ್‌ಗಳು ನೇಮಕವಾಗುವರೆಂದು ಹಿಂದೆ ಒಂದು ಪ್ರವಾದ ಹುಟ್ಟಿತ್ತು. ಈಗಿನ ಯೇರ್ಪಾಡನ್ನು ನೋಡಿದರೆ ಮೆ. ಹೇಮಾಜಿರಾಯರೊಬ್ಬರೇ ತತ್ಕಾಲಕ್ಕೆ ರಿಜಿಸ್ಟ್ರಾರಾಗಿರುವರೆಂದು ತೋರುತಿದೆ. ಇಬ್ಬರು ರಿಜಿಸ್ಟ್ರಾರ್‌ಗಳಿರಬೇಕಾದ ಆವಶ್ಯಕತೆ ಸದ್ಯಕ್ಕೆ ಏನೂ ತೋರುವದಿಲ್ಲವಾಗಿ ಈಗಿನ ಯೇರ್ಪಾಡೇ ನ್ಯಾಯ್ಯವಾಗಿರುತಿದೆ. ಈಗ ಮಾಡಲ್ಪಟ್ಟ ಯೇರ್ಪಾಡಿನಲ್ಲಿ ಪ್ರಾಯೇಣ ಒಬ್ಬರಿಗೂ ನೌಕರಿಗಳು ತಪ್ಪಲಿಲ್ಲವೆಂತಲೂ, ಪರಂತು ಕೆಲವರಿಗೆ ಮಾತ್ರ ತಲಬುಗಳು ನಾಸ್ತಿಕದಮೆ ಮಾಡಲ್ಪಟ್ಟಂತೆಯೂ ತಿಳಿದೆವು. ಮೆ. ಹೇಮಾಜಿರಾಯರಿಗೆ ನೂರು ರೂಪಾಯಿಗಳು ಇಜಾಫೆಯಾದದರಿಂದ ಕೊಡಗು ಇಲಾಖೆಯಿಂದ ರಿಜಿಸ್ಟ್ರಾರ್ ಕೆಲಸಕ್ಕಾಗಿ ಸಲ್ಲುತಿದ್ದ ೫೦ ರೂಪಾಯಿಗಳು ನಾಸ್ತಿಕೂಪಾದುತೆಯೂ ಸದರೀ ಮೊಬಲಗು ರೆಸಿಡೆನ್ಸಿ ಸರಿಸ್ತೇದಾರ್ ಮೆ|| ಅನಂತರಾಮರಾವ್ ಬಿ. ಎ. ಯವರಿಗೆ ಕೊಡಲ್ಪಟ್ಟಂತೆಯೂ ಕೇಳಿದೆವು. ಇದರಿಂದ ಚೀಫ್ ಕೋರ್ಟು ರಿಜಿಸ್ಟ್ರಾರಿಗೆ ೫೦ ರೂಪಾಯಿಗಳು ಮಾತ್ರ ಇಜಾಫೆಕೊಡಲ್ಪಟ್ಟಂತೆಯೇರ್ಪಟ್ಟಿತು.

---

A question of privilege.—ಮಾಹೇ ಮಾರ್ಚ್ ೨೬ನೇ ತಾರೀಖಿನಲ್ಲಿ ಮೈಸೂರು ಚೀಫ್ ಕೋರ್ಟಿನಲ್ಲಿ ಮೆ|| ಫ್ರ್ಯಾಮರ್ ಮತ್ತು ಮೆ|| ಕೆಂಬುಶೆಟ್ಟರವರು ಒಂದು ಅಪೀಲ್ ಮೊಕದ್ದಮೆಯನ್ನು ತೈಸಲ್ಮಾಡಿದರು. ಈ ಮೊಕದ್ದಮೆಯ ಮುಖ್ಯಾಂಶವೇನೆಂದರೆ,—ಕ್ರಿಮಿನಲ್ ಪ್ರೊಸೀಡಿಂಗ್ಸ್ ನಡೆಯುತಲಿರುವಾಗ್ಯೆ ಮ್ಯಾಜಿಸ್ಟ್ರೇಟರ ಮುಂದೆ ಮಾನನಷ್ಟಕರವಾದ ಮಾತುಗಳನ್ನಾಡುವದಕ್ಕೆ ಒಬ್ಬ ಕಕ್ಷಿಗಾರನಿಗೆ ಅಧಿಕಾರವುಂಟೇ ಇಲ್ಲವೇ ಯೆಂಬದು. ಪ್ರಸಕ್ತ ಮೊಕದ್ದಮೆಯ ಅಪೀಲ್ದಾರಳಾದ ಒಬ್ಬ ಬ್ರಾಹ್ಮಣಸ್ತ್ರೀಯು, ವಿಶ್ವಾಸಘಾತಕತೆಯ ಆಕ್ಷೇಪಣೆ ಬಗ್ಗೆ ಒಬ್ಬ ಮ್ಯಾಜಿಸ್ಟ್ರೇಟರ ಮುಂದೆ ದಸ್ತಕ್ ಮಾಡಲ್ಪಟ್ಟಳು. ಸದರೀ ಹೆಂಗಸು, ಅಪೀಲ್ ಪ್ರತಿವಾದಿಯಾದ ಬ್ರಾಹ್ಮಣನು ತನಗೆ ಕೊಡಬೇಕಾದ ಮೊಬಲಗನ್ನು ಆತನ ಬಳಿಯಿದ್ದ ತನ್ನ ಒಡವೆಗಳನ್ನು ಕೊಡಬೇಕೆಂಬದಾಗಿ ಕೇಳಿದ್ದಕ್ಕೆ ಮಾನನಷ್ಟದ ಬಗ್ಗೆ ಮಾನ್ನೂರು ರೂಪಾಯಿಗಳು ಕೊಡಿಸಬೇಕೆಂದು ಆತನು ಅವಳ ಮೇಲೆ ಮುನ್ಸಫ್ ಕೋರ್ಟಿನಲ್ಲಿ ಫಿರ್ಯಾದ್ ಮಾಡಿದಂತೆಯೂ ಮುನ್ಸಫರು ಮಾನನಷ್ಟಕರವಾದ ಮಾತುಗಳನ್ನಾಡಿದ್ದಕ್ಕಾಗಿ ೨೦ ರೂಪಾಯಿಗಳ ಜುಲ್ಮಾನೆಯಾಗಿ ಅದನ್ನು ಅಪೀಲ್ ಪ್ರತಿವಾದಿಗೆ ಕೊಡಿಸಿದರೆಂತಲೂ ಅದರಮೇಲೆ ಅವಳು ಅಪೀಲ್ ಮಾಡಿರುವದಾಗಿಯೂ ತಿಳಿಸಿದರು. ಚೀಫ್ ಕೋರ್ಟು ಇಬ್ಬರು ಜಡ್ಜೀಗಳೂ, ಕ್ರಿಮಿನಲ್ ಕೇಸಿನಲ್ಲಿ ಅಪರಾಧಿಗಳ ಮಾತುಗಳು ಯೆಂದಿಗೂ ಮಾನನಷ್ಟಕರವಾಗಲಾರವೆಂತಲೂ ಇತರ ಪಾರ್ಟೀಸ್‌ನವರ ಹಾಗೆ ಅವರಿಗೆ ಒಂದುಬಗೆ ಪ್ರಿವಿಲೇಜ್ ಉಂಟೆಂತಲೂ, ಆದದರಿಂದ ಮುನ್ಸಫರು ಕೊಟ್ಟ ತೀರ್ಪು ಸರಿಯಲ್ಲವಾಗಿ ಅಪೀಲ್ದಾರಳಿಗೆ ವಿಧಿಸಲ್ಪಟ್ಟ ೨೦ ರೂಪಾಯಿಗಳ ದಂಡನಾದ್ರವ್ಯವು ಅಪೀಲ್ ಕೋರ್ಟು ಫೀಜಿನೊಡನೆ ವಾಪಸ್ ಕೊಡಿಸತಕ್ಕದ್ದೆಂಬದಾಗಿಯೂ ಅಭಿಪ್ರಾಯಪಟ್ಟು ಕೆಳ ಕೋರ್ಟಿನ ಫೈಸಲನ್ನು ರದ್ದುಮಾಡಿದರು.

---

Rig-Veda—ಈ ದಿನಗಳಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟ "ರಾಯಲ್ ಏಷ್ಯಾಟಿಕ್ ಸೊಸೈಟಿ" ಎಂಬ ಸಮಾಜದ ಪತ್ರಿಕೆಯ ಸಂಚಿಕೆಯಲ್ಲಿ ಇಂಡ್ಯಾದೇಶದ ಕೇವಲ ಗೌರವ್ಯವಾದ ಋಗ್ವೇದ ಸಂಹಿತೆಯ ವಿಷಯವಾಗಿ, ಚಿಕ್ಕದಾಗಿಯೂ ಈಚೆಗೆ ಕಂಡುಹಿಡಿಯಲ್ಪಟ್ಟದ್ದಾಗಿಯೂ ಇರುವ ಕೆಲವು ಸಂಗತಿಗಳು ಸೂಚಿಸಲ್ಪಟ್ಟಿರುತಿವೆ. ಇವುಗಳಿಗೆ ವಿದ್ಯಾವಂತರಾದ ಯೂರೋಪಿಯನ್ನರೂ ಪಂಡಿತಂಮನ್ಯರಾದ ನೇಟೀವರು ಸಹ ಈ ವೇದವು ಯಾವ ವಿವರಣೆಗೂ ಮತ್ತು ಪರ್ಯಾಲೋಚನೆಗೂ ಒಳಪಡುವ ಕಾಲಕ್ಕೆ ಉತ್ಪತ್ತಿಯಾದದ್ದಲ್ಲವೆಂತಲೂ, ಹಾಗೆ ಯಾವ ಆಧಾರದಮೇಲಾಗಲಿ ವಿಮರ್ಶೆ ಮಾಡಲ್ಪಟ್ಟಾಗ್ಯೂ ಇದರ ಮೂಲವು ದುರವಗಾಹವೆಂತಲೂ ಈಗ ಅರಿಯುವದಕ್ಕೆ ಆಗದೆಂತಲೂ ಗ್ರಹಿಸಿದ್ದರು. ಆದರೆ ಮೆ|| ಫ್ರೆಡರಿಕ್ ಪಿಂಕಾಟ್ ಯವರಿಂದ ಇದರ ರಹಸ್ಯವು ಕಂಡುಹಿಡಿಯಲ್ಪಟ್ಟು, ಅನಾದಿಯಾದ ಈ ಗ್ರಂಥವು ಸನಿಯಾದ ಪದ್ಧತಿಯ ಮೇರೆಗೆ ಪ್ರತಿದಿನವು ಹಾಡುತ ಬಂದ ಕಲಾ, ಪ್ರತಿ ಸಂಗತಿಯೂ ಆಯಾ ಅಧಿದೇವತೆಯ ಪ್ರಾರ್ಥನಾರೂಪವಾದ್ದಾಗಿಯೂ, ಛಂದೋಬದ್ಧವಾಗಿಯೂ ಶಾಸ್ತ್ರೀಯಗ್ಯ ಅನುಮೋದಿಸಲ್ಪಡತಕ್ಕದ್ದಾಗಿಯೂ ಇದೆಯೆಂತಲೂ ಇವರು ಕಂಡುಹಿಡಿದರು. ಅನೇಕ ವಿಧಗಳಾಗಿ ಭಾಗಿಸಲ್ಪಟ್ಟಿರುವ ಋಗ್ವೇದಭಾಗಗಳು ಪ್ರತಿಪ್ರಮೇಯವೂ ಪ್ರತ್ಯೇಕವಾಗಿ ಏರ್ಪಡಿಸಲ್ಪಟ್ಟು ಆವುಗಳೆಲ್ಲವೂ ಸೋಮರಸವೆಂಬ ಯಜ್ಞಾಂಗವಾದ ಅಮೃತಧಾರೆಯು ಭಾಗಿನೇಯರಾದ ದೇವತೆಗಳಿಂದ ಪಿವೇಚಿಸಲ್ಪಟ್ಟಂತೆ ಸಹ ನಿರೂಪಿಸುತ್ತಾರೆ. ಮತ್ತು ಅನೇಕ ಪ್ರಭೇದಗಳುಳ್ಳ ಕವಿಶಿರೋಮಣಿಗಳ ಸಂಗತಿಗಳೆಲ್ಲವೂ ಪ್ರಾಚೀನಪದ್ಧತಿಗಳಮೇರೆಗೆ ಪರಸ್ಪರ ಸಂಬಂಧವನ್ನನುಸರಿಸಿ ಪ್ರತ್ಯೇಕಿಸಲ್ಪಟ್ಟಿವೆ. ಇವರು ಕಂಡುಹಿಡಿದದ್ದರಲ್ಲಿ ಕೇವಲ ಪ್ರಾಮುಖ್ಯಸಂಗತಿಯು ಈ ವೇದದ ಮೊದಲನೇ ಪುಸ್ತಕವೆಲ್ಲಾ ಗೌತಮರ್ಷಿಯನ್ನು ವಿವರಿಸತಕ್ಕದ್ದಾಗಿಯೂ ಪ್ರಾಚೀನರಾದ ಬ್ರಾಹ್ಮಣರು ಹಾಡುತಲಿದ್ದ ಯಾಗದ ಪ್ರತಿಕ್ರಿಯೆಗಳನ್ನನುಸರಿಸಿದ್ದಾಗಿದೆಯೆಂತಲೂ. ಆದ್ದರಿಂದಲೇ ಆಸ್ತ್ಯವಾಗ ಕರತೆಯನ್ನು ಹೊಂದಿದ್ದ ಪ್ರಾಚೀನರು ಮಾಡಿದ ಜಗದಾಧಾರಶಕ್ತಿಯ ಸ್ತೋತ್ರ ಸಮುದಾಯವೆಂತಲೂ ಹೇಳುವದಾಗಿದೆ. ಪ್ರಾಚೀನ ಕವಿವಂಶ ಪರಂಪರೆ, ಅಂದರೆ ಆರ್ಷೇಯವೆಲ್ಲವೂ ಅದರಲ್ಲಿ ವ್ಯಕ್ತಗೊಂಡಿರುತಿದೆ. ಅವರುಗಳ ಧ್ಯಾನರೂಪವಾದ ಕವನಗಳು ಕ್ರಮವಾಗಿ ಕಾಣಿಸಲಾಗಿವೆ. ಅವು ಸೋಮರಸವೆಂಬ ಯಜ್ಞಾಂಗವಾದ ಸಾಧುಪಾನ ನಿವೇದನ ಸಂದರ್ಭವನ್ನು ಸವರ್ಣನೆಗೊಳಿಸುತ್ತವೆ. ಮಿಕ್ಕ ಪುಸ್ತಕಗಳು ಅಥವಾ ಭಾಗಗಳಲ್ಲಿ, ಮುಂಚೆ ಹೇಳಿದಮೇರೆಗೆ ಪ್ರತಿಬಿಂಬಿಸುವ ಪ್ರೋಕ್ತವಾದ ಸಂಗತಿಯೂ ಆಯಾದೇವತೆಗೆ ಸಂದ ಭಾಗವು ಪಾರವಾಗಿ ಅರಿಕೆಮಾಡಲ್ಪಟ್ಟ ಪದ್ಧತಿಯ ಮೇರೆಗೆ ಯೋಜಿತಿಸಲ್ಪಟ್ಟದ್ದಾಗಿ ಪ್ರಾಸಬದ್ಧವಾಗಿಯೂ ಛಂದೋಯುಕ್ತವಾಗಿಯೂ ಇವೆ. ಇದರ ಕ್ರಮವು ಅನಿವಾರ್ಯವಾದ ಅಂಶಗಳಲ್ಲಿ ಬದಲಾವಣೆ ಯಾಗಬೇಕಾದ್ದರಿಂದ ವಿಸ್ತೃತವಾದರೆ ವಿನಾಯಿಸಿ ಸಂಕ್ಷೇಪ ಸ್ವಭಾವವುಳ್ಳದ್ದಾಗಿದೆ.—ವೃತ್ತಾಂತಬೋಧಿನಿ.

---

Educational.—ಶ್ರೀಮನ್ಮಹಾರಾಜಾ ಸರ್ಕಾರದವರು ಈಗ ತಮ್ಮ ರಾಷ್ಟ್ರದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಇರುವ ಪಾರಮಾರ್ಥಿಕವಾದ ಆಸಕ್ತಿಯನ್ನಾಲೋಚಿಸಿ ಪ್ರಾಮುಖ್ಯವಾದ ಪಾಠಶಾಲೆಗಳೆಲ್ಲದರಲ್ಲಿಯೂ ನೆಲಗೊಂಡಿರುವ ವಿದ್ಯಾಭ್ಯಾಸದ ಕ್ರಮವು ಸರ್ವಕಲಾಶಾಲಾ ಪರೀಕ್ಷೆಗಳಿಗೆ ಅನುಗುಣವಾದ ಅಭಿವೃದ್ಧಿ ಸ್ಥಿತಿಯಲ್ಲಿದೆಯೋ ಯಿಲ್ಲವೋ ಯೆಂಬದನ್ನು ಪರಿಶೀಲಿಸುವದರ ದ್ವಾರಾ ಘನತರ ವಹಿಸಿದ ಶ್ರೀಮನ್ಮಹಾರಾಜರವರ ದಿವಾನರು ಇದೇ ಜೂನ್ ತಿಂಗಳ ೯ನೇ ತಾರೀಖಿನಲ್ಲಿ ಕಂಡ ಪ್ರೊಸೀಡಿಂಗ್ಸಿನಲ್ಲಿ ಕಾಲೇಜ್ ಶಾಲಾ ಉಪಾಧ್ಯಾಯರುಗಳ ಮೊಕರರಿ, ವೇತನಗಳು ಜಾಸ್ತಿಯಲ್ಲಿ ಪ್ರೋತ್ಸಾಹಕರವಾಗಿಯೂ ಉಚಿತವಾಗಿಯೂ ಇರುವ ಸೌಲಭ್ಯಗಳನ್ನು ಕಲ್ಪಿಸುತ್ತಾರೆಂಬೆವು—

ಸೆಂಟ್ರಲ್ ಕಾಲೇಜ್.—ಇಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿ ಈಚೆಗೆ ಕೆಲವು ಹೊಸ ಯೇರ್ಪಾಡುಗಳಾಗಿರುವದರಿಂದ ಪ್ರಕೃತದಲ್ಲಿ ಯಾವ ಬದಲಾವಣೆಯೂ ಆವಶ್ಯಕವಿಲ್ಲ. ಆದರೆ ಪ್ರಥಮ ವಿದ್ಯಾಭ್ಯಾಸಂಗದ ತರಗತಿಗಳು ಅಲ್ಲಿ ಅನಾವಶ್ಯಕವೆಂಬದರಮೇಲೆ ಅಂಥಾ ತರಗತಿಗಳು ರದ್ದುಮಾಡಲ್ಪಟ್ಟದ್ದರಿಂದ ಅವಕ್ಕಾಗಿ ನಿಯಮಿಸಲ್ಪಟ್ಟದ್ದ ವೈಸ್ ಪ್ರಿನ್ಸಿಪಲ್ ಇನ್ನು ಆನಾವಶ್ಯಕವೆಂದು ಭಾವಿಸಿ ಆ ಉದ್ಯೋಗಸ್ಥರಿಗೆ ಪ್ರಿನ್ಸಿಪಲ್ ಅಸಿಸ್ಟೆಂಟರೆಂಬ ಅಭಿದಾನವನ್ನು ಕೊಡಲಾಯಿತು.

ಮೈಸೂರು.—ಮೈಸೂರಲ್ಲಿ ಮಹಾರಾಜರ ಕಾಲೇಜಿನಲ್ಲಿಯೂ ಪ್ರಥಮ ವಿದ್ಯಾಭ್ಯಾಸದ ತರಗತಿಗಳನ್ನು ಬದಲ್ಲಾಕ್ ತೆಗೆದುಹಾಕಿ ಆಯಾ ವಿದ್ಯಾರ್ಥಿಗಳು ಶಾಲೆಯ ಹೊಸವಿಭಾಗಕ್ಕೆ ವಿಷಯಬಾಯಿರು.

ಶಿವಮೊಗ್ಗ.—ಶಿವಮೊಗ್ಗಾ ಕಾಲೇಜಿನ ಹೆಡ್ ಮಾಸ್ಟರ್ ಮೆಸ್ಟರ್ ಕಿಂಗ್ ಯವರನ್ನು ಅವರ ಉದ್ಯೋಗದಲ್ಲಿ ಖಾಯಮಾಡಿ ಅವರನ್ನು ಇಲಾಖೆಗೆ ಅರ್ಹರನ್ನಾಗಿ ಮಾಡಲ್ಪಟ್ಟದ್ದಲ್ಲದೆ ಪಾಠಶಾಲೆಯ ಮುಖ್ಯತರಗತಿಗಳಲ್ಲಿ ಬೋಧಕಕಾರ್ಯಕ್ಕೋಸ್ಕರ ಮಾಹೆಯಾನಾ ೫೦ ರೂಪಾಯಿ ಸಂಬಳದ ಒಬ್ಬ ಅಸಿಸ್ಟೆಂಟ್ ಮಾಸ್ಟರ್ ನೇಮಕ ಮಾಡಲ್ಪಡುವರು.

ತುಮಕೂರು.—ಇಲ್ಲಿನ ಹೆಡ್ ಮಾಸ್ಟರ್ ಮೆ|| ಶ್ಯಾಫಾಂಯವರ ಕಾರಣಿಯು ಸ್ವಲ್ಪ ಕೆಟ್ಟಿರುವದರಿಂದ ಯಾಗಲು ಅರ್ಧ ಬೆಲೆಗೆ ಇವರನ್ನು ಅರ್ಹರನ್ನಾಗಿ ಮಾಡಬೇಕಾಗಿರುವದರಿಂದ ಅವರಿಗೂ ಹೆಡ್ ಕ್ವಾರ್ಟರ್ಸ್‌ನಲ್ಲಿಯೇ ಟ್ರೇನ್ ಸ್ಕೇಲಿಗೆ ಸೇರಿ ಮುಖ್ಯಕೆಲಸವನ್ನು ನೋಡುತಿರುವಂತೆ ಏರ್ಪಡಿಸಿ ಹೆಡ್ ಮಾಸ್ಟರ್ ಕೆಲಸಕ್ಕೆ ಕಾಲೇಜಿನ ಅಸಿಸ್ಟೆಂಟುಗಳಲ್ಲೊಬ್ಬ ಸಮರ್ಥರಾದ ಒಬ್ಬ ನೇಟೀವರು ಕಳುಹಿಸಲ್ಪಡುವರು.

ಹಾಸನ.—ಇಲ್ಲಿರುವ ಎಸ್. ಕೃಷ್ಣರಾವ್, ಬಿ. ಎ. ಯವರು ಡಿಪ್ಟಿ ಅಮಲ್ದಾರರಾಗಿ ಮೊಕರರ್ ಮಾಡಲ್ಪಟ್ಟರು. ಇತರ ಇಬ್ಬರು ಅಸಿಸ್ಟೆಂಟ್ ಮಾಸ್ಟರುಗಳ ಕಾರಣಿಯು ಇತರ ಇಲಾಖೆಗೆ ವರ್ಗ ಮಾಡಲ್ಪಡುವದು. ಪರಂತು ಅಲ್ಲಿಗೆ ೬೦ ಅಥವಾ ೫೦ ರೂಪಾಯಿಗಳ ಸಂಬಳದಮೇಲೆ ಬಿ. ಎ. ಪಾಸ್ ಹೊಯ್ದಲ್ಲಿ ತೇರ್ಗಡೆಯಾದ ಇಬ್ಬರನ್ನು ಮೊಕರರ್ ಮಾಡುವದಲ್ಲದೆ ೨೦ ರೂಪಾಯಿ ಸಂಬಳದಮೇಲೆ ಒಬ್ಬನಾ ಒಬ್ಬ ಕನ್ನಡಮುನಿಷಿಯೂ ಮೊಕರರ್ ಮಾಡುವರು. ಮೆ|| ವೇಲಾಂತಪಿಳ್ಳೆಯವರು ೪೦ ರೂಪಾಯಿಗಳ ಕೆಲಸದಲ್ಲಿರುವರು.

**ಕೋಲಾರ್.**—ಕೋಲಾರ್ ಪಾಠಶಾಲೆಗೆ ಪರೀಕ್ಷೆಗಳಲ್ಲಿ ಹೆಡ್ ಮಾಸ್ತರಾಗಿರುವ ಮಿಸ್ಟರ್ ಡನ್ನಿಂಗ್ ಯವರು ವರ್ಗಮಾಡಲ್ಪಡುವರು. ಅಲ್ಲಿನ ಹೆಡ್ ಮಾಸ್ತರವರು ಶೀಘ್ರಪಡೆಯುವರು. ಸಹ ಕಾರಾದ ಮತ್ತೊಬ್ಬರು ೩೦ ಅಥವಾ ೪೦ ರೂಪಾಯಿ ಕಲಬಿನಮೇಲೆ ದ್ವಿತೀಯೋಪಾಧ್ಯಾಯರಾಗಿರುವರು. ಮಿ|| ಪಾಪಣ್ಣಯ್ಯನವರು ಮಾಹೆಯಾನಾ ೩೦ ರೂ|| ಕಲಬಿನಮೇಲೆ ೩ನೇ ಅಸಿಸ್ಟೆಂಟ್ ಮಾಸ್ತರಾಗಿರುವರು.

ದೀರ್ಘಮುಗಳೂರು ಪಾಠಶಾಲೆಯಲ್ಲಿ ಈಗ ಹೊಸವಿಮರ್ಶೆ ಅವಶ್ಯಕವಿಲ್ಲ.

ಪರೀಕ್ಷೆಗಳು.—ಇಲ್ಲಿನ ಹೆಡ್ ಮಾಸ್ಟರ್ ಕೋಲಾರಕ್ಕೆ ವರ್ಗವಾಗುವದರಿಂದ ಇಲ್ಲಿಗೆ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸಮರ್ಥರಾಗಿರುವ ಒಬ್ಬ ನೇಟಿವ್ ಅಸಿಸ್ಟೆಂಟ್ ಮಾಸ್ಟರು ಯಾವ ಶಾಲೆಯಿಂದಲಾದರೂ ಕಳುಹಿಸಲ್ಪಡುವರು.

ಹೊಸ ವಿಮರ್ಶೆಯ ಮೇರೆಗೆ ತೆರೆದ ಸ್ಥಳಗಳು.

೧. ಮೈಸೂರು, ಶಿವಮೊಗ್ಗಾ ಕಾಲೇಜ್‌ಗಳ ಹೆಡ್‌ಮಾಸ್ಟರುಗಳಿಗೂ, ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲ್ ಅಸಿಸ್ಟೆಂಟರಿಗೂ ಕಲಬ್ ೨೫೦ ರೂಪಾಯಿಗಳಲ್ಲಿ ಶುರುವಾಗಿ ೪೦೦ ರೂ. ವರಿವಿಗೂ ಪಾಲಿಯಾನಾ ೩೦ ರೂ. ಇಜಾಫೆಯಿಂದ ಬಡ್ತಿಯಾಗುವದು.

೨. ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ಹೈಸ್ಕೂಲ್ ಹೆಡ್ ಮಾಸ್ಟರುಗಳು ಕಾಲೇಜುಗಳ ಅವ್ವಲ್ ಅಸಿಸ್ಟೆಂಟ್ ಮಾಸ್ಟರರು, ಇವರುಗಳ ಕಲಬು ೧೦೦ ರೂ. ಮೊದಲು ಪಾಲಿಯಾನಾ ೨೦ ರೂ. ಇಜಾಫೇ ಮೇರೆಗೆ ೨೫೦ ರೂ. ವರಿವಿಗೂ ಬಡ್ತಿಯಾಗುವದು.

೩. ಬಿ. ಎ. ಪರೀಕ್ಷೆ ಕೊಟ್ಟು ಹೈಸ್ಕೂಲ್‌ಗಳ ಮುಖ್ಯ ಅಸಿಸ್ಟೆಂಟ್ ಮಾಸ್ಟರುಗಳಾಗಿಯೂ ಕಾಲೇಜಿನ ಸಾಮಾನ್ಯ ಅಸಿಸ್ಟೆಂಟ್ ಮಾಸ್ಟರುಗಳಾಗಿಯೂ ಇರುವವರ ಕಲಬು ೫೦ ರಿಂದ ಪಾಲಿಯಾನಾ ೧೦ ರೂ. ಇಜಾಫೆಯಿಂದ ೮೦ ರೂ. ವರಿವಿಗೂ ಅಭಿವೃದ್ಧಿಯಾಗುವದು.

೪. ಹೈಸ್ಕೂಲ್‌ಗಳಲ್ಲಿ ಸಾಮಾನ್ಯ ಸಹಾಯೋಪಾಧ್ಯಾಯರುಗಳಾಗಿ ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರ ಕಲಬು ೩೦ ರಿಂದ ಪಾಲಿಯಾನಾ ೫ ರೂ. ಇಜಾಫೇ ಮೇರೆಗೆ ೪೫ ರೂ. ವರಿವಿಗೂ ಬಡ್ತಿಯಾಗುವದು.

೫. ಮಿಡಲ್ ಸ್ಕೂಲ್‌ಗಳಲ್ಲಿ ಟೀಚರುಗಳಾಗಿಯೂ ಮೆಟ್ರಿಕ್ಯುಲೇಷನ್ ಎಂಟ್ರನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದವರಾಗಿಯೂ ಇರುವವರ ಕಲಬು ೧೫ರಿಂದ ಪಾಲಿಯಾನಾ ೨ ರೂ. ಇಜಾಫೆಯಿಂದ ೨೫ ರೂ. ವರಿವಿಗೂ ಆಗಬಹುದೆಂಬುದು.

ಈಗ ನೆಲಗೊಳ್ಳುವ ಹೊಸ ಏರ್ಪಾಟು ವಿದ್ಯಾಭಿವೃದ್ಧಿಗೆ ಕೇವಲ ಹಿತಕಾರಿಯಾಗಿಯೂ, ಇಂಗ್ಲಿಷ್ ವಿದ್ಯಾ ವ್ಯಾಸಂಗದಲ್ಲಿ ವಿಶೇಷ ಶ್ರಮಪಟ್ಟು ಪಾಸಾಗಿರತಕ್ಕ ಸ್ವದೇಶೀಯರಿಗೆ ಪ್ರೋತ್ಸಾಹಕರವಾಗಿಯೂ, ಈ ಇಲಾಖಾ ನೌಕರಿಯನ್ನು ಅಂಗೀಕರಿಸತಕ್ಕ ವಿದ್ಯಾವಂತರಿಗೆ ಉತ್ಸಾಹಕರವಾಗಿಯೂ ಪರಿಣಮಿಸುವದಕ್ಕೆ ಸಂದೇಹವಿಲ್ಲವು.—ಮೈ. ಸ್ಯ. ಬೋಧಿನಿ.

## LETTERS TO THE EDITOR.

ಅಯ್ಯಾ—ನಮ್ಮ ತಾಲ್ಲೂಕು ಅಮಲ್‌ದಾರರಿಗೆ, ಸಾಬಕ್ ಮಹಾರಾಜರವರ ಆಳಿಕೆ ಕಾಲದಲ್ಲಿಯೂ, ಈಚೆಗೆ ಸರ್ ಮಾರ್ಕ್ ಕಬ್ಬನ್ ಸಾಹೇಬರವರ ಕಾಲದಲ್ಲಿಯೂ ಮಾಹೆಯಾನಾ ೪೦ ರೂಪಾಯಿಗಳ ಸಂಬಳ ದೊರಕುತಲಿತ್ತು. ಆ [illegible] ಅವರಿಗೆ ೬ ರೂಪಾಯಿಗಳ ವರಿವಿಗೆ ಜುರ್ಮಾನೆ ಹಾಕುವ ಅಧಿಕಾರವಿತ್ತು. ಮಿ|| ಬೌರಿಂಗ್ ಸಾಹೇಬರವರ ಕಾಲದಲ್ಲಿ ಅವರಿಗೆ ನೂರು ರೂಪಾಯಿಗಳವರಿವಿಗೆ ಕಲಬ್ ಜಾಸ್ತಿಯಾಗಿ ಸೆಕೆಂಡ್ ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟವು. ಅಲ್ಲದೆ ಅವರಿಗೆ ಒಂದೆ ಕೊಡಲ್ಪಟ್ಟಿದ್ದ ದಿಂಬು ಶಿಪಾಯಿಗಳಿಗೆ ಬದಲಾಗಿ ಮೀಲಾ ಕುದುರೆಗಳೂ ಕೊಡಲ್ಪಟ್ಟವು. ಮಾಳಿಗೆ ಮನೆಗಳಿಗೆ ಬದಲಾಗಿ ಬಂಗ್ಲೆಗಳು ಕಟ್ಟಿದವು. ನಾಗರಿಕತೆಯು ಹೆಚ್ಚಾಗಿ ಇಂಗ್ಲಿಷ್ ತರಹೇ ಮೇಜುಗಳನ್ನೂ ಕುರ್ಚಿಗಳನ್ನೂ ಕೋಟುಗಳನ್ನೂ ಅವರೇ ಕಲ್ಪಿಸಿಕೊಂಡರು. ಹೀಗೆಲ್ಲ ಸಕಲ ವಿಧದಿಂದಲೂ ಇಂಗ್ಲಿಷನವರಿಗೆ ಕಡಿಮೆ ಯಿಲ್ಲದಂತಾ ಸೌಲಭ್ಯಗಳು ದೊರೆತಾದವು. ಕನ್ನಡ ಅರ್ಜಿಗಳು ಬರೆಯುವ ಪದ್ಧತಿಯನ್ನು ನಿಲ್ಲಿಸಲೆಂತ ಬಹು ದಿವಸ ಆಲೋಚಿಸಿ ಕೊಡಲ್ಪಡದಿದ್ದರೂ ಡೆಮ್ಮಿ ಆಫೀಷಿಯಲ್ ಲೆಟರುಗಳು ಮೇಲ್ಪಟ್ಟ ಆಫೀಸರರಿಗೂ ಇವರಿಗೂ ನಡೆಯುತಲಿವೆ. ಮೈಸೂರು ಗೆಜೆಟ್‌ನಲ್ಲಿ ಮಾತ್ರ ಇವರ ಹೆಸರಿನ ಮುಂಗಡೆಯಲ್ಲಿ ಮಿಸ್ಟರೆಂತಲಾಗಲಿ, ಮಹಾರಾಜಶ್ರೀ ಯೆಂತಲಾಗಲಿ ಹಾಕಲ್ಪಡದೆ ಯಿರುವದಕ್ಕೆ ಯೇನು ಕಾರಣವೋ ನಾನರಿಯೆನು. ಮದರಾಸ್ ಮುಂಬೈ ಡಿಸ್ಟ್ರಿಕ್ಟ್‌ಗಳಲ್ಲಿ ಅಮಲ್‌ದಾರರುಗಳಿಗೆ ಸ್ವಲ್ಪ ಹೆಚ್ಚುಕಡಮೆಯಾಗಿ ಇಲ್ಲಿನ ಕಲಬೂ ಅಧಿಕಾರಗಳೂ ಕೊಡಲ್ಪಟ್ಟಿರುವಂತೆ ತೋರಿಬರುತ್ತೆ. ಒರಿಜಿನಲ್ ಕೋರ್ಟುಗಳಲ್ಲಿ ಸಬ್ ಡಿವಿಜನ್ ಮುನಸಫರಿಗೂ ಅವರಿಗೆ ಮೇಲ್ಪಟ್ಟ ಜಡ್ಜಿಗಳಿಗೂ ಸ್ವರೂಪತಃ ಭೇದವೇನೂ ತೋರಲಿಲ್ಲವು. ಆ ಬಾಗ್ಯೂ ಅಮಲ್‌ದಾರರಂತೆ ಮುನಸಫರಿಗೂ ಮಿಸ್ಟರ್ ಪತ್ರಿಕೆಗೊಂದು ಹಾಕಲ್ಪಡುವದಿಲ್ಲವು. ಅಯ್ಯಾ ಎಡಿಟರವರೇ, ನಾನು ನಿಜವಾಗಿ ಕೇಳುವದೇನೆಂದರೆ—ಆಫೀಸಿಯಲ್ಲಿ ಶಿರುಗುರಿಲಿರತಕ್ಕ ಕಾಲೇಜು ಅಸಿಸ್ಟೆಂಟ್‌ಗಳಿಗೂ, ರಸ್ತೆ ಮರಮ್ಮತು ಮಾಡತಕ್ಕ ಇಂಜನಿಯರ್‌ಗಳಿಗೂ ಮಿಸ್ಟರ್ ಯೆಂದು ಬರೆಯಬಹುದು; ಪ್ರಜಾಪಾಲನಾಧಿಕಾರವುಳ್ಳ ರೆವಿನ್ಯೂ ಮತ್ತು ಮಾಜಿಸ್ಟ್ರೇಟ್ ಅಧಿಕಾರಿಗಳಿಗೆ ಬರೆಯಲಾಗದೆ? ಯಾಂದನ್ನು ನೋಡಿದರೂ ಅದಿ ಆಶ್ಚರ್ಯಕರವಾಗಿದೆ. ನೇಟಿವ್ ಸ್ಟೇಟ್‌ನಲ್ಲಿ ಇಂಥಾ ಪ್ರಭೇದಗಳನ್ನೆಲ್ಲ ಕಂಡುಹಿಡದು ಅರ್ಥಗಳಂ ಪರಿಹರಿಸಬೇಕಾದ್ದು ಮುಖ್ಯಧರ್ಮವಾಗಿದ್ದರೂ ಹೀಗೆ [illegible] ನೆಲೆ ಅನುಭವಿಸುವರು ಯುಕ್ತವಾಗಿಲ್ಲವು. ಈ ಅಂಶವು ಅಧಿಕಾರಿಗಳಿಗೆ ಗೋಚರವಾದರೆ ನಮ್ಮನಿಮ್ಮ ಮಾತುಗಳು ಅಗತ್ಯಗೋಚರವಾದಂತೆ ಆಗುವದು.

ತಮ್ಮವಿಶ್ವಾಸಿ,

ವಿಚಾರಪರರು.

## NEWS LETTERS.

### THE BIRTHDAY FESTIVITIES

(FROM OUR MOFUSSIL CORRESPONDENTS.)

"ನಗರ ತಾ|| ೨೯ನೇ ಜೂನ್ ೧೮೮೪—ಘನವನ್ನು ಹೊಂದಿದ ಶ್ರೀಮನ್ ಮಹಿಸೂರು ಚಾಮರಾಜೇಂದ್ರ ಒಡೆಯರ್ ಬಹದ್ದೂರವರಿಗೆ ಕುಮಾರರುಳ್ಳವಿನೀ ರಾಜ್ಯಕ್ಕೆ ಪೂರ್ಣ ಪ್ರಕಾಶಾನಂದ ಕೂಟಾದ ಶುಭೋದಯವನ್ನು ಕುರಿತು.

"ಈವೃತ್ತಾಂತವು ಅತ್ಯಂತ ಮಹಾಮಯ ಸುಖ ಸೇವಾಗಿ ಪ್ರಕಟಿಸುವ ವೃತ್ತಾಂತ ಪತ್ರಿಕೆಯು ಈ ತಿಂಗಳ ೧೧ನೇ ತಾರೀಖಾದ ಈ ದಿವಸ ಒಳ್ಳೇ ಸಮಯದಲ್ಲಿ ಈ ತಾಲ್ಲೂಕ್ ಅಮಲ್‌ದಾರ್ ಆದ್ಯ ಮುಂಗೋಪಿಯವರ ಕಚೇರಿಗಳಲ್ಲಿ ತನ್ನದಂತೆ ಬಂದು ಸೇರಿ ಪುನಃ ಪುನಃ ನಿರೀಕ್ಷಿಸಿ ಆನಂದಪಟ್ಟು ತತ್ಕಾಲದಲ್ಲಿ ಅಲ್ಲಿ ಸೇರಿದ್ದ ಗ್ರಾಮಾಧಿಕಾರಿ ಮುಂತಾದ ತಮ್ಮ ಸಮೀಪವರ್ತಿಗಳಾಗಿದ್ದ ಜನಗಳೆಲ್ಲ ಆಶ್ಚರ್ಯವಾಗಿಯೂ, ಬುದ್ಧಿಗೂ ಪ್ರಸನ್ನ ಮಾಡುತ್ತ, ಶ್ರೀ ಮತ್ ಅತಿವ ಮಹಾಸ್ವಾಮಿಗಳಾದ ಕೃಷ್ಣರಾಜ ಒಡೆಯರ್ ಬಹದ್ದೂರವರ ಪುಣ್ಯೋದಯವನ್ನು ಘನವನ್ನು ಹೊಂದಿದ ಶ್ರೀಮನ್ ಮಹಾರಾಜ್ಞೀಯವರಾದ ಇಂಡಿಯಾ ಚಕ್ರವರ್ತಿನೀಯವರ ಕೃಪಾ ಪುರಸ್ಸರವಾದ ಕಟಾಕ್ಷವೀಕ್ಷಣವನ್ನು ಶ್ರೀ ಚಾಮರಾಜೇಂದ್ರ ಒಡೆಯರವರನ್ನು ಹೊಂದಿದುಕೊಂಡಿದ್ದ ಸಮಾಚಾರ ಸುಲಗ್ನದಲ್ಲಿ ಈ ಸಂವತ್ಸರ ಬರಲಿಲ್ಲವೆಂದು ಹಾತ್ತುಕೊಂಡಿದ್ದ ವಿಸಲು ತಿಂಗಳಿಂದ ಕಾಂತಿಗಾಗಿ ಕಾದುಕೊಂಡಿದ್ದ ಪ್ರಜೆಗಳಿಗೆ ಪರಮ ಸುಖಕರವಾದ ವೃಷ್ಟಿಯು ಪ್ರಾರಂಭವಾದ್ದರಿಂದ ಸೇರಿದ ಜನಗಳೆಲ್ಲ ಉತ್ತರೋತ್ತರ ತಮ್ಮ ಭಾಗ್ಯವನ್ನು ಸುಖವಮ್ಮಕುರಿತು ಮನೋಲ್ಲಾಸಯುಕ್ತರಾಗಿ ಸ್ತೋತ್ರವನ್ನು ಮಾಡಿದರು. ತತ್ಕ್ಷಣದಲ್ಲಿಯೇ ಪ್ರದೋಷಕಾಲದ ಮುಖ್ಯೋದ್ದೇಶದಿಂದ ಅಲ್ಲಿ ನೆರೆಗೊಂಡಿರುವ ಭೂಪಾಲ ದನಗರದ ಅರಸರುಗಳಿಂದ ಪೂಜಾರಾಧನೆಯನ್ನು ಕೈಗೊಂಡ ಅನಾದಿ ಕೋಡೂರು ಶಂಕರೇಶ್ವರಸ್ವಾಮಿ ಸನ್ನಿಧಿಯಲ್ಲಿ ದೀಪಾರಾಧನೆ ಮಂಗಳಾರ್ತಿ ವಾದ್ಯಘೋಷ ಮುಂತಾದ ವಿಜೃಂಭಣೆಯೊಂದಿಗೆ ಸಾಧಾರಣವಾದಗಳು ಮಾಡಿಸತಕ್ಕಂಥ ಕೇವಲ ಆಸಕ್ತಿ ಪೂರ್ವಕವಾಗಿಯೂ, ಭಕ್ತಿರಸಯುಕ್ತವಾಗಿಯೂ, ಮಿ|| ಅಮಲ್‌ದಾರರವರು ತಾವೇ ಕೂಡ ನಿಪುಣರಾದ ನೆರವೇರಿಸಿರುವ ೧೧ನೇ ತಾರೀಖಿನದಿನ ಇಷ್ಟೋಪ್ಯಧಿಕವಾಗಿಯೂ ಸಾಂಗವಾಗಿಯೂ ದಿವಾರಾತ್ರಿಯಲ್ಲಿ ಕೂಡ ಆ ದೇವರ ಸಮ್ಮುಖದಲ್ಲಿ ನಡೆಯಬೇಕಾದ ಉತ್ಸವಾದಿಗಳಿಗೆ ಕ್ರಮಗಳನ್ನು ಕಲಿಸಿ ಯೋಜಿಸಿದ್ದಲ್ಲದೆ ಕಸಬೆಯಲ್ಲಿಯೂ ಇತರ ಸ್ಥಳಗಳಲ್ಲಿಯೂ ಹರುಷಾನಂದವಾಗಿ ಮಂಗಳ ಶಾಸನವನ್ನು ನಡೆಸಲು ಕ್ರಮವೇರ್ಪಡಿಸತಕ್ಕ ಬಸ್ತಿಯ ಮ|| ರಾ|| ರಾ|| ಶಿರಸ್ತೇದಾರ್ ಬಾಬೂರಾಯರವರಿಗೆ ವಿಸ್ತಾರವಾಗಿ ಬರೆದು ಮೆಕ್ಕಸ್ಸಿನಲ್ಲಿ ಕಳುಹಿಸಿದ್ದಕ್ಕಾಗಿ ಅವರೂ ಕೇವಲ ಉತ್ಸಾಹಪೂರ್ವಕವಾಗಿ ಸ್ವಲ್ಪ ಕಾರ್ಯವನ್ನು ಪೂರೈಸುವ ಲವಲವಿಕೆಯಿಂದ ನಡೆಸಿದರು.

ಮಿಡಲ್ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಎಸ್. ವೆಂಕಟವರದಯ್ಯಂಗಾರ್ಯರವರ ಆಜ್ಞಾ ಶಕ್ತಿ ಮನೋರಂಜನವಾಗಿ ಈ ಡಿಸ್ಟ್ರಿಕ್ಟಿನಲ್ಲಿರತಕ್ಕ ದೇವಾಲಯ, ಮಸೀದಿ, ಮಸ್‌ಜಿದ್ ಮುಂತಾದ ಎಲ್ಲಾ ಸ್ಥಳಗಳಲ್ಲಿಯೂ ಪೂಜಾರಾಧನೆ, ಸ್ತೋತ್ರ ರಾಜಾಶೀರ್ವಾದ ಧ್ಯಾನ ಮೊದಲಾದ ಸಂತ್ರಮಗಳು ಕೊಂಡಾಡಬೇಕೆಂಬ ಆಜ್ಞಾಪನೆಯಲ್ಲಿ ಆದ ನಿರೂಪಣವು ಇಪ್ಪತ್ತರಲ್ಲಿಯೇ ಈ ನಗರ ತಾಲ್ಲೂಕಿಗೆ ಕಲಿಸಿದ್ದರಿಂದ ಅಮಲ್‌ದಾರರವರು ಸರ್ಕ್ಯುಲರ್ ಟಿನಲ್ಲಿದ್ದವರು ಹಾಕತಕ್ಕಾಗಿಲ್ಲದಂತೆ ತಾಲ್ಲೂಕ್ ಮುಖೇ ಹಳ್ಳಿಕಡೆಯಲ್ಲಿಯೂ ನಡೆಯಬೇಕಾದ ಮಂಗಳೋತ್ಸವಕ್ಕೆ ತಾಕೀದ್‌ಗಳನ್ನು ಹೊರಡಿಸಿ ತಕ್ಕ ಜನಗಳನ್ನು ಪ್ರತ್ಯೇಕ ಪ್ರತ್ಯೇಕ ದೇವಾಲಯದಿಂದ ಮರ್ಯಾದೆಯಿಂದ ಮಾಡಿಸಬೇಕೆಂದು ತಮ್ಮ ಕಾಲೇಜು ಉದ್ಯೋಗಸ್ಥರಿಗೆ ನೇಮಿಸಿ ಕಳುಹಿಸಿಕೊಟ್ಟು ೧೨ನೇ ತಾರೀಖು ಮೇಲ್ವಿಚಾರಣೆಯನ್ನು ಇಟ್ಟುಕೊಂಡು ನಗರ ಕಸಬೆಯಲ್ಲಿ ನಡೆಯತಕ್ಕ ಕೆಲಸಗಳಿಗೋಸ್ಕರ ೧೧ರಸ್ತೇದಾರರವರಿಗೂ ವಿವರವಾಗಿ ತಿಳಿಸಿ ತಾವೂ ಬಂದು ಬೇಕಾದ ಕ್ರಮಗಳನ್ನನುಸರಿಸಿ ೧೧ನೇ ತಾರೀಖ್ ಸ್ಥಿರವಾರ, ಗ್ರಾಮಸ್ಥರು, ಸುಖವಾಗಿ ದೊಡ್ಡ ಮನುಷ್ಯರು ಎಲ್ಲರೂ ಸೇರಿಕೊಂಡು ಶ್ರೀ ನೀಲಕಂಠೇಶ್ವರ ಪಾರ್ವತಮ್ಮನವರು, ಗುಂಡಿ ವೆಂಕಟರಮಣಸ್ವಾಮಿ ದೇವಾಲಯಗಳಲ್ಲಿ ಉತ್ಸವಾದಿಗಳು ಗ್ರಾಮ ಪಿರವಣಿಗೆಗಳು ಇತರ ದೇವಾಲಯಗಳಲ್ಲಿ ಪೂಜಾರಾಧನೆಗಳು, ಮಸ್‌ಜಿದ್‌ಗಳಲ್ಲಿ ಸ್ತೋತ್ರಾರಾಧನೆಗಳು ನಡೆಸಿದ್ದಲ್ಲದೆ ಮಿ|| ಅಮಲ್‌ದಾರರವರು ೧೧ನ್ನು ಸ್ವಂತ ಖರ್ಚಿನಿಂದ ಬೋಳುರು(?) ಕ್ಯಾಪಟನ್ ಮಠದಲ್ಲಿ ಸ್ತೋತ್ರ ಧ್ಯಾನ ಮೊದಲಾದವುಗಳು ಬಹಳ ಉತ್ಸಾಹದೊಂದಿಗೆ ನೆರವೇರಿಸಿದರು. ಈ ತಾಲ್ಲೂಕಿಗೆ ಸೇರಿದ ಗಿಮಜಾರ್ದಾಪುರದ ಮಠದ ಶ್ರೀ ಮದ್ರಾಮಚಂದ್ರಸ್ವಾಮಿ ಸನ್ನಿಧಿಯಲ್ಲಿಯೂ, ಪ್ರಸಿದ್ಧವಾದ ಹುಂಚಾಮಠ ಪದ್ಮಾವತೀ ದೇವಿ ಸನ್ನಿಧಿಯಲ್ಲಿಯೂ, ಪಟ್ಟಕುಪ್ಪೆ ಆಗ್ರಹಾರ ಮತ್ತು ದೇವಾಲಯ, ಬ್ರಹ್ಮೇಶ್ವರ, ತಂರಗನಿವಿನಾಯಕ, ಕೋಡೂರು ಶಂಕರೇಶ್ವರ, ಸಂಪಿಕಟ್ಟೆ ಶಂಬುಲಿಂಗೇಶ್ವರ, ಕುಲಿಂಬ್ಲ ನೃಸಿಂಹ, ಈ ದೇವಾಲಯಗಳಲ್ಲಿಯೂ ಪೂಜಾರಾಧನೆಗಳು, ಕುಲಿಂಬ್ ಅನ್ನಸ್ವಾಮಿದಲ್ಲಿ ಸ್ತೋತ್ರಗಳು ವಿಶಿಷ್ಟ ಸ್ಥಳಗಳಲ್ಲಿಯೂ ಕೂಡ ರಾಜಾಶೀರ್ವಾದಗಳು ಮಹಾಭಕ್ತಿಯಿಂದ ವಿಶ್ವಾಸಪೂರ್ವಕ ಸೇರಿದಜನಗಳ ಆನಂದಸ್ವಾನಂದಗಳು ಬಹು ಸಂಭ್ರಮವಾಗಿ ನಡೆಯಲ್ಪಟ್ಟವು.

ಈ ಸಮಾಚಾರ ಮಧ್ಯದಲ್ಲಿ ನಮ್ಮ ಪಾಲಕರಾದ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ದಯಾರ್ದ್ರ ಲಕ್ಷ್ಯ ಪುಣ್ಯವಿಶೇಷವೂ, ಉದ್ಭವಿಸಿದ ರಾಜಕುಮಾರರ ಪುಣ್ಯೋತ್ಸವಾಯವೂ ಸೃಷ್ಟಿಸ್ತೋತ್ರ ಮಾಡಿದಾಗ್ಯೂ ಅವರವಾಗಿದೆ ಯೆಂಬವಕ್ಕೆ ಒಂದು ಪ್ರತ್ಯಕ್ಷ ದೃಷ್ಟಾಂತವನ್ನು ಒಡನೆ ಕೊಂದಾದುವದಸ್ಕೆ ಭಕ್ತಿ ವಿಶ್ವಾಸ ವೃದ್ಧಿಯನ್ನು ಪಡಿಸುವದೆಂಬದಕ್ಕೆ ಸಾಕ್ಷ್ಯ ಕಾರಣವಾದದು.

ಮಾಹೇಮುಚೆಗಳು ೧೧ನೇ ತಾರೀಖುದಿವಸ ಪ್ರತೋಷಕಾಲಕೊಡಲು ಆರಂಭಿಸಿ ನಡೆಯಬೇಕೆಂತ ಉತ್ತೇಜಿಸಿದ ಪ್ರಸ್ತಾವನೆಗೆ ಆಸಾಧ್ಯ ತೋರಿಸುವ ಮೇಘಪಟಲಿಗಳು ಹುಂಬರುಮತಿಯು ತಲೆದೋರಿ ಪ್ರಾರಂಭವಾದ್ದನ್ನು ಕುರಿತು ಅನೇಕ ಪ್ರಜೆಗಳು ಅಧಿಕಾರಿಗಳು ಕೂಡ ಯೋಚಿಸುತ್ತಿದ್ದ ಸಮಯದಲ್ಲಿ ಘನವನ್ನು ಹೊಂದಿದ ನಮ್ಮ ಶ್ರೀಮಹಾರಾಜರವರಿಗೆ ಉಂಟಾಗಿರುವ ಪರಮೇಶ್ವರನ ಪರಿಪೂರ್ಣ ದಯಾನುಗ್ರಹಬಲವು ದೊಡ್ಡದೆಂದು ಕಂಡುಹಿಡಿದಂತೆ ವೃಷ್ಟಿಯು ಗೋಚರವಾಗುವಂತೆ ಶೀಘ್ರದಲ್ಲಿ ನಿರ್ಮಲಾಕಾಶವಾಗಿ ಮೇಘಪಟಲಿಗಳು ಪಲಾಯನಸೂಚನವನ್ನು ತೋರಿ ಉತ್ಸವಾದಿಗಳು ನೆರವೇರಿ ಜನಗಳು ತಮ್ಮ ಸ್ಥಾನಗಳನ್ನು ಸೇರಿದ ಉತ್ತರಕ್ಷಣದಲ್ಲಿಯೇ ಆವಿರ್ಭವಿಸಿ ಪುನಃ ವೃಷ್ಟಿಬಿದ್ದದನ್ನು ಜನರೂ ಆಶ್ಚರ್ಯಪಟ್ಟರು. ಶ್ರೀಮನ್ ಮಹಾರಾಜರವರು, ಮಹಾರಾಜ್ಞೀಯವರೂ ರಾಜಕುಮಾರರೂ ಇತರುಗಳನ್ನು ಕುರಿತು ಆಶ್ರಯದಿಂದ ಸರ್ವಮಂಗಳ ಶಾಸನವಾದ ಬಿನ್ನಹಗಳನ್ನು ವಿಶಿಷ್ಟವಾಗಿ ಸೃಷ್ಟಿಕರ್ತನಲ್ಲಿಗೆ ಅರ್ಪಿಸಿಕೊಂಡಾಗಿರುವ ಸಮಾಚಾರವನ್ನು ತಿಮ್ಮಪತ್ರಿಕೆಯಲ್ಲಿ ಪ್ರಕಟಪಡಿಸಬೇಕೆಂದು ಪ್ರಾರ್ಥಿಸುತ್ತೇವೆ.

ಶಿವನಾಗಪುರ, ತಾ|| ೨೫ನೇ ಜೂನ್ ೧೮೮೪—ಮೈಸೂರು ಶ್ರೀಮನ್ ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದ್ದೂರವರಿಗೆ ಪುತ್ರೋತ್ಸವವಾದ ಆನಂದವರ್ಷ ಪ್ರವಾಹದೊಳು ನಿರವಧಿಯಾಗಿ ಅತ್ಯಂತ ಪ್ರಕಾಶಗೊಳಿಸುವಂತೆ ಬಹಿರಂಗ ಪ್ರಸಿದ್ಧಪಟ್ಟ ವಿಜ್ಞಾಪನೆ ಪ್ರಕಟವಾಗಿರುವ ರಾಜಭಕ್ತಿಯುಳ್ಳ ಅನೇಕ ಸಂಖ್ಯೆ ದೊಡ್ಡ ಮನುಷ್ಯರ ಪತ್ರಗಳು ಬಂದಿವೆ ಮುಟ್ಟಿವೆ. ಇದಕ್ಕೆ ಶೇಖರವಾದ ನನ್ನದೊಂದು ಅಕ್ಷರಶ್ರುತಪುಷ್ಟ ವಿಜ್ಞಾಪನೆಯನ್ನು ಪಂಡಿತನೆಯೊದನೆ ತಮ್ಮ ಸನ್ನಿಧಿಯಲ್ಲಿ ಸಮರ್ಪಣೆಮಾಡಿ ಸಮ್ಮಾನಿಸತಕ್ಕ ಭಕ್ತಿಯಿಂದ ಪ್ರಾರ್ಥಿಸುವದೇನೆಂದರೆ—

ಮಹಾಪ್ರಭುಗಳವರ ಆಜ್ಞಾನುಸಾರ ಸರಕಾರದಿಂದ ಕೊಡಲ್ಪಟ್ಟಂತಾ ದ್ರವ್ಯವ್ಯಯದಿಂದ ಆಗಮಾಡಿಸಿದಂತಾ ಪ್ರತಿ ತಾಲ್ಲೂಕು ಮಹಾ ಎಲ್ಲಾ ದೊಡ್ಡದೊಡ್ಡ ಸ್ಥಳದಲ್ಲಿ ಅನ್ನ ಸಂತರ್ಪಣಾದ್ಯನೇಕ ವಿನೋದಗಳು ನಡೆಯುತ್ತಿಂಬುವವು ವಿಚಾರಮುಖೇನ ಪ್ರಸಿದ್ಧವಾಗಿರುತ್ತೆ. ಆದರೆ, ಯಾವ ದ್ರವ್ಯ ಸಹಾಯವೂ ಇಲ್ಲದೆ ತನ್ನ ಸ್ವಂತ ಖರ್ಚಿನಿಂದ ಸ್ವಕೀಯ ಮನೋಭಿಲಾಷೆಯೊದನೆ ಈ ಮಾಹೇ ತಾ|| ೧೧ನೇ ಸ್ಥಿರವಾರ ನಮ್ಮ ಶ್ರೀಮನ್ ಮಹಾರಾಜರವರ ಪುತ್ರೋತ್ಸವ ದಿವಂಗ ನಾಮ ಕರಣಾನಂದವಿಶೇಷ ಆಶೀರ್ವಾದ ವಿಜಯವನ್ನು ನಿರಂತರ ಅಭಿವೃದ್ಧಿ ಪ್ರಕಟಪ್ರಾರ್ಥನಾರೂಪವಾಗಿ ಕಾಸಿರತಕ್ಕ ಗ್ರಾಮದ ಸರಹದ್ದಿಗೆ ಸೇರಿದ ಪಾವನ ವಿಶಿಷ್ಟ ದೇವಾಲಯಗಳಿಗೆ ವಿಶೇಷಸ್ಥಾನ ಚಪ್ಪರಮೇಲ್ಕಟ್ಟು ಮಕರತೋರಣಾದ್ಯಲಂಕಾರಗಳೊಡನೆ ವಿಶೇಷ ಉತ್ಸವಾದಿಗಳಿಂದ ನಿಷ್ಠಾರವಾಗಿ ದೀಪೋತ್ಸವಾದಿಗಳು ನೆರವೇರಿಸಿ ಬಳಿಕ ಪುರಜನಗಳಿಗೆ ಸಕ್ಕರೆ ಪಂಚಾಪ್ಪಟ್ಟು ಬ್ರಾಹ್ಮಣರಿಗೆ ಸಂತರ್ಪಣೆಯನ್ನು ಮಾಡಿಸಿರುತ್ತಾರೆ.

ಬಳಿಕ ಆ ಗ್ರಾಮದ ಶ್ರೀಲಕ್ಷ್ಮೀನೃಸಿಂಹಸ್ವಾಮಿಯವರ ಸನ್ನಿಧಿಯಲ್ಲಿ ಶ್ರೀಮನ್ ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರವರ ವಂಶಾಭಿವೃದ್ಧಿಯುಂಟ ನಡರಿ ವಿಜಯಾಯುರಾರೋಗ್ಯ ಐಶ್ವರ್ಯಾದ್ಯನೇಕಾನಂದವನ್ನು ಅನುಕೂಲಿಸುವದರ ಮೂಲಕ ಸ್ವಪ್ರಜೆಗಳಾದ ನಮ್ಮಗಳನ್ನು ಸುಖಸೌಭಾಗ್ಯ ಬಹುಮಾನದಿಂ ಪರಿಪಾಲಿಸಬೆಂದು ಪ್ರಾರ್ಥನೆ ಕಡಸುವಾರ ಸಕಾಸವರಾದ ಬ್ರಾಹ್ಮಣರಿಂದ ಆಶೀರ್ವಾದವಂದನೆ ಬಳಿಕ ತನ್ನ ಸ್ವಸ್ಥಳಕ್ಕೆ ಅದ್ಭುತವಿಶೇಷಗಳೊಡನೆ ಸೇರಿದ ಶಿವನಾಗಪುರ ಕಾರಿಯಂಸುತ್ತಾದಾರ್ ಕೃಷ್ಣಪ್ಪನು ಮೇಲ್ಕಂಡ ಉತ್ಸವ ಮಾಡಿದ ರಾಜಭಕ್ತಿಗಾಗಿ ಸಕಲರೂ ಕೊಂಡಾಡತಕ್ಕದ್ದಾಗಿರುತ್ತೆ.

ತರೀಕೆರೆ, ತಾ|| ೨೦ನೇ ಜೂನ್ ೧೮೮೪—ಅಜ್ಜಂಪುರದ ಹೋಬಳಿ ಸ್ಕೂಲ್ ಮಾಸ್ಟರು ಶಂಕರಶಾಸ್ತ್ರಿಯಾದ ನಾನು ಸಂತೋಷವಾಗಿ ಈ ಕೆಳಗೆ ಬರೆಯುವ ಶುಭವಾರ್ತೆ ನಿಮ್ಮ ಪತ್ರಿಕೆಯಲ್ಲಿ ಪ್ರಚುರಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ತರೀಕೆರೆ ತಾಲ್ಲೂಕಿನವರು ಶ್ರೀಮನ್ ಮಹಾರಾಜರವರ ಪುತ್ರೋತ್ಸವಸಂದರ್ಭದಲ್ಲಿ ನಡೆಸಿದ ವಿವರ.

ಶ್ಲೋ|| ನೃಪಸುತಸುಖವಾರ್ತಾ ಮೋದ್ಯನಾನಾಲೋಕದೇಶಃ|
ಕುಸುಮಕುಸುಮಮಂಟಪಸರ್ವದೀಪಾಳಿಸಂದ್ಯೈಃ||
ಚೆದುದಧಿಸುಲಿವೆಂಕಧರ್ಮ ಪಾದ್ಯೈಯೂಪ್ಯೈ |ಜನ
ಕನಿಚಯಕಿವಾರ್ತಾಪತ್ರಿಕಾ ಪೂರ್ಣಚಂದ್ರಃ ||

